# ಶ್ರೀ ಶ್ರೀಶ್ರೀ 1008ಶ್ರೀಮಾಧವತೀರ್ಥ ಶ್ರೀಪಾದಂಗಳವರಚರಿತ್ರೆ

(ಕ್ರೀ.ಶ. 1797 – 1809)

**ಯೋ ಶೇಷಾಂಶಸಮುದ್ಭೂತಂ ಅಶೇಷವಿಷಯಪ್ರದಮ್।**
**ಮಾಧವಜ್ಞಾನಸಂಪನ್ನಂ ಮಾಧವಾರ್ಯಗುರುಂ ಭಜೇ॥**
**ದ್ವೈತಸಿದ್ಧಾಂತ ವಕ್ತಾರಂ ಕಾಣ್ವಾಂತೇವಾಸಿನಂ ಮುದಾ।**
**ಭಜೇಹಂ ಜ್ಞಾನದಂ ನಿತ್ಯಂ ಸುರದ್ರುಮನಿಭಂ ಗುರುಮ್॥**

ಜಗದ್ಗುರು ಶ್ರೀಮದಾನಂದತೀರ್ಥರು ಸ್ಥಾಪಿಸಿದ ಉಡುಪಿಯ ಶಿರೂರು ಮಠದ 23ನೇ ಯತಿಪುಂಗವರಾದ ಶ್ರೀಲಕ್ಷ್ಮೀಮನೋಹರ ತೀರ್ಥರ ಕರಸಂಜಾತರಾದ ಶ್ರೀಶ್ರೀಶ್ರೀಮಾಧವತೀರ್ಥರು ಉಡುಪಿಯಲ್ಲಿ ಯತಿದೀಕ್ಷೆಯನ್ನು ಪಡೆದು, ಶ್ರೀಕಣ್ವಮಠವನ್ನು ವೀರಘಟ್ಟದಲ್ಲಿ ಸ್ಥಾಪಿಸಿದರು. ಇವರು ಭಗವತ್ಸಂಕಲ್ಪಕ್ಕನುಸಾರವಾಗಿ ಶಾ.ಶ 1718 ನಳನಾಮ ಸಂವತ್ಸರ ಮಾಘಶುದ್ಧ ಪಂಚಮಿ, (02–02–1797) ಶ್ರೀ ಕಣ್ವ ಮಹರ್ಷಿಗಳ ಜಯಂತಿ (ವಸಂತ ಪಂಚಮಿ)ಯಂದು ಉಡುಪಿಯ ಮಧ್ವ ಸರೋವರದಲ್ಲಿ ಯತಿದೀಕ್ಷೆಯನ್ನು ಪಡೆದು, ಕಾಣ್ವ ಶಾಖೆಯ ದ್ವೈತಪರಂಪರೆಯಲ್ಲಿರುವ ಬ್ರಾಹ್ಮಣರಿಗೆ ಮಾರ್ಗದರ್ಶನವೀಯುತ್ತ ಮತ್ತು ಪರಂಪರೆಯನ್ನು ರಕ್ಷಿಸಿ ಬೆಳೆಸುತ್ತಾ ಶಾ.ಶ 1731 ಶುಕ್ಲನಾಮ ಸಂವತ್ಸರ ಚೈತ್ರ ಶುದ್ಧ ಚತುರ್ಥಿಯಂದು (20.03.1809) ವೃಂದಾವನಸ್ಥರಾದರು.

ಶಾಸನಗಳಲ್ಲಿ ಉಲ್ಲೇಖವಾಗಿರುವಂತೆ ಸುರಪುರ ತಾಲ್ಲೂಕು ತಿಂತಿಣಿ ಗ್ರಾಮವು ಪ್ರಸಿದ್ಧ ಅಗ್ರಹಾರವಾಗಿದ್ದು ಉನ್ನತ ವಿದ್ಯಾವ್ಯಾಸಂಗ ಕೇಂದ್ರವಾಗಿತ್ತೆಂದು ದಾಖಲಾಗಿದೆ. ಈ ಗ್ರಾಮದ ಸನಿಹದಲ್ಲಿರುವ ದೇವಪುರದಲ್ಲಿ ವಾಸವಾಗಿದ್ದ, ಷಡ್ದರ್ಶನಗಳನ್ನು, ಮಧ್ವಾಚಾರ್ಯರ ಕೃತಿಗಳನ್ನು, ವೇದೋಪನಿಷತ್ತುಗಳನ್ನು ಅಧ್ಯಯನ ಮಾಡಿದ ಆತ್ರೇಯ ಗೋತ್ರದ ಬ್ರಾಹ್ಮಣ ಮತ್ತು ಇವರಿಗೆ ಒಪ್ಪುವ ಸದ್ ಗೃಹಣಿಯ ಉದರದಲ್ಲಿ ಶ್ರೀ ವೆಂಕಟೇಶಾಚಾರ್ಯರು ಜನ್ಮತಾಳಿದರು. (ಶ್ರೀ ವೆಂಕಟೇಶಾಚಾರ್ಯರು ಆತ್ರೇಯಗೋತ್ರಕ್ಕೆ ಸೇರಿದವರೆಂದು, ಶ್ರೀವಿದ್ಯಾಭಾಸ್ಕರ ಶ್ರೀಪಾದಂಗಳು, ಸುರಪುರದ ಗೋಪಾಲಾಚಾರ್ಯ ಅಗ್ನಿಹೋತ್ರಿ, ಆನೆಹೊಸೂರಿನ ಡಾ॥ ಭೀಮಸೇನರಾವ ಕುಲಕರ್ಣಿ, ಬೈಚಬಾಳದ ಪ್ರಹ್ಲಾದಾಚಾರ್ಯ ವೆಂಕಪ್ಪಾಚಾರ್ಯ ಪುತ್ರ ಮಾರುತಿ, ಶ್ರೀನಿವಾಸಾಚಾರ್ಯ ಜೋಷಿ ಬುದ್ದಿನ್ನಿ ಇವರೆಲ್ಲರೂ ನನಗೆ ತಿಳಿಸಿದ್ದಾರೆ.)

ಒಂದು ಸಲ ವನದುರ್ಗದ ಮುಜುಮದಾರ ಭಾಸ್ಕರರಾಯನು ಶ್ರೀರಾಘವೇಂದ್ರ ಯತಿಗಳ ವೃಂದಾವನದ ದರ್ಶನಕ್ಕೆಂದು ಶಾಂತಪುರದ ರಾಜಪುರೋಹಿತರೊಂದಿಗೆ ಮಂಚಾಲಿಗೆ (ಈಗಿನ ಮಂತ್ರಾಲಯ) ಹೋಗಿದ್ದರು. ಇವರು ಸುರಪುರ ಸಂಸ್ಥಾನದ ಮುಜುಮದಾರರು ಮತ್ತು ಜೊತೆಗಿದ್ದವರು ರಾಜಪುರೋಹಿತರೆಂದು ತಿಳಿದಿದ್ದರೂ ಕಾಣ್ವಶಾಖೀಯರೆಂಬ ಕಾರಣಕ್ಕೆ ಇವರಿಗೆ ಮನ್ನಣೆಯನ್ನು ಕೊಡದೆ ತಾರತಮ್ಯ ಭಾವದಿಂದ ನೋಡಲಾಯಿತು. ಈ

ಘಟನೆಯಿಂದ ಅವರ ಮನದಲ್ಲಿ ನಮ್ಮ ಶಾಖೆಯವರಿಗಾಗಿ ಒಂದು ಮಠವಿದ್ದರೆ ಈ ಪರಿಸ್ಥಿತಿ ಬರುತ್ತಿರಲಿಲ್ಲವೆಂಬ ಭಾವ ಜಾಗೃತಗೊಂಡಿತು. ಮರಳಿ ಸುರಪುರಕ್ಕೆ ಬಂದಮೇಲೆ ತಮ್ಮ ಬಂಧುಬಾಂಧವರಲ್ಲಿ ಈ ವಿಚಾರದ ಪ್ರಸ್ತಾಪ ಮಾಡಿದರು.

ವೆಂಕಟೇಶಾಚಾರ್ಯ ಮತ್ತು ಶ್ರೀನಿವಾಸಾಚಾರ್ಯರ ತಾಯಿಯು ದೇವಪುರದಲ್ಲಿರುವಾಗ ನಿತ್ಯವು ಗಂಡನ ಜೊತೆಗೆ ಬ್ರಾಹ್ಮಿ ಮುಹೂರ್ತದಲ್ಲಿ ಎದ್ದು ತಳಿ ರಂಗೋಲಿಯಾದ ಬಳಿಕ ಮಡಿಯಿಂದ ತುಳಸಿ ವೃಂದಾವನವನ್ನು ಪೂಜಿಸಿ, ಪ್ರದಕ್ಷಿಣೆ ಹಾಕಿದ ಬಳಿಕ ಆದಿಶೇಷ (ಕಲ್ಲಿನ ನಾಗರ) ನ ಮೂರ್ತಿಯನ್ನು ಪೂಜಿಸುತ್ತ,

'ಹೇ ಶೇಷದೇವನೇ, ನನಗೆ ಸತ್ ಶಾಸ್ತ್ರಪಾರಂಗತನೂ, ಷಡ್‌ದರ್ಶನ ಪರಿಣಿತನೂ ಮತ್ತು ವೇದಧರ್ಮ ರಕ್ಷಿಸುವ ಪುತ್ರನನ್ನು ಕರುಣಿಸು." ಎಂದು ದಿನವೂ ಬಹಳ ಭಕ್ತಿಯಿಂದ ಬೇಡಿಕೊಳ್ಳುತ್ತಿದ್ದಳು. ದಿನಗಳುರುಳಿದಂತೆ ಸಾಧ್ವಿಯು ಗರ್ಭಿಣಿಯಾಗಿ ಗಂಡು ಮಗುವಿಗೆ ಜನ್ಮನೀಡಿದಳು. ಮಗುವಿಗೆ ವೆಂಕಟೇಶನೆಂದು ನಾಮಕರಣ ಮಾಡಿದರು. ಮಗು ತಾನು ಬೆಳೆದಂತೆ ತಾಯಿಯೊಂದಿಗೆ ಬೆಳಿಗ್ಗೆ ವೃಂದಾವನಕ್ಕೆ ಪ್ರದಕ್ಷಿಣೆ ಹಾಕುತ್ತಿದ್ದ. ಬಳಿಯಲ್ಲಿದ್ದ ಕಲ್ಲಿನ ನಾಗಪ್ಪನನ್ನು ಭಕ್ತಿಯಿಂದ ನಮಸ್ಕರಿಸುತ್ತಿದ್ದ. ನಾಗರಪಂಚಮಿ ಬಂದರೆ ವೆಂಕಟೇಶನಿಗೆ ಎಲ್ಲಿಲ್ಲದ ಸಂಭ್ರಮ. ನಾಗಪ್ಪನ ನೈವೇದ್ಯಕ್ಕೆ ಇಟ್ಟ ಚಿಗಳಿ ತನಗೆ ತಿನ್ನಲು ಸಿಗುವುದರ ಹಾದಿಯನ್ನೇ ಕಾಯುತ್ತಿದ್ದ. ಹೀಗೆ ಒಂದು ದಿನ ಅಂಗಳದಲ್ಲಿ ಆಟವಾಡುತ್ತಿರುವಾಗ ಒಂದು ನಾಗರಹಾವು ಹರಿದಾಡುತ್ತ ಅಂಗಳದಲ್ಲಿ ಬಂದಿತು. ಅಲ್ಲಿಯೇ ಆಡುತ್ತಿರುವ ವೆಂಕಟೇಶನು ಅದರ ಬಾಲಹಿಡಿದುಕೊಂಡು ಕೆಲವೊಮ್ಮೆ ಹೆಡೆಯನ್ನು ಮುಟ್ಟುತ್ತ ಆಟವಾಡುತ್ತಿದ್ದ. ಆ ನಾಗರಹಾವು ಬುಸುಗುಡದೇ ಪ್ರೇಮದಿಂದ ಅವನೊಂದಿಗೆ ಆಟವಾಡುತ್ತಿತ್ತು. ಬಹಳ ಹೊತ್ತಾದರೂ ಮಗನ ಸುಳಿವು ಮನೆಯಲ್ಲಿ ಕಾಣದಿರಲು, ಮನೆಯ ಹೊರಗೆ ಬಂದು ನೋಡುತ್ತಾಳೆ. ಮಗು ವೆಂಕಟೇಶನು ನಾಗರ ಹಾವಿನೊಂದಿಗೆ ಪ್ರೇಮದಿಂದ ಆಟವಾಡುವುದನ್ನು ನೋಡಿ ಗಾಬರಿಯಿಂದ ಚೀರುತ್ತಾಳೆ. ಅವಳ ಚೀರಾಟಕ್ಕೆ ನಾಗರಹಾವು ಮನೆಯಿದ ಹೊರಗೆಹೋಗಿ ಅಡಗಿಕೊಳ್ಳುತ್ತದೆ. ಶೇಷದೇವರ (ನಾಗಪ್ಪನ) ಅನುಗ್ರಹದಿಂದ ಹುಟ್ಟಿದ ಈ ಬಾಲಕನು ಶೇಷದೇವನ ಭಕ್ತನಾಗಬಹುದೋ ಏನೋ? ಶೇಷದೇವನ ಅಂಶ ಸಂಭೂತನು ಇರಬಹುದೋ ಏನೋ? ಎಂಬ ಸಂಶಯ ಮನದಲ್ಲಿ ಮೂಡಿ ಮಗುವನ್ನು ಎತ್ತಿಕೊಂಡು ಎದೆಗವಚಿಕೊಂಡಳು.

ವೆಂಕಟೇಶನು ಬೆಳೆದು ಉಪನಯನವಾದ ಮೇಲೆ, ತಂದೆಯಿಂದಲೇ ಎಲ್ಲ ಶಾಸ್ತ್ರಗಳ, ದರ್ಶನಗಳ, ಶುಕ್ಲಯಜುರ್ವೇದದ, ಶ್ರೌತಸೂತ್ರಗಳ, ಗೃಹ್ಯಸೂತ್ರಗಳ ಅಧ್ಯಯನ ಮಾಡುತ್ತಾನೆ. ಮುಂದೆ ಜ್ಯೋತಿಷ್ಯ ಶಾಸ್ತ್ರ ಕಲಿಯಬೇಕೆಂಬ ಹಂಬಲ ವೆಂಕಟೇಶಾಚಾರ್ಯನಿಗೆ ಹುಟ್ಟಿತು. ಸೂಕ್ತ ಅಧ್ಯಾಪಕರ ಹುಟುಕಾಟ ಅವನ ತಂದೆಯವರಿಂದ ಪ್ರಾರಂಭವಾಯಿತು.

'ಕಂಚಗಾರ ಬೆಳಗಲ್ ಗ್ರಾಮದ ಶುಕ್ಲಯಜುರ್ವೇದೀಯ ಮಧ್ವಭಟ್ಟರ ಮಗ ಧರ್ಮಭಟ್ಟರು ಆದವಾನಿಯಲ್ಲಿ ಇದ್ದಾರೆ. ಇವರು ಶ್ರೀಯಾಜ್ಞವಲ್ಕ್ಯರ ಶುಭ ಸಂಪ್ರದಾಯದಲ್ಲಿ ಜನಿಸಿದ ಸದಾಚಾರ ಸಂಪನ್ನರು ಮತ್ತು ಇವರು ವೇದವೇದಾಂಗಪಾರಂಗತರು, ಪ್ರಕಾಂಡ ಪಂಡಿತರು ಮತ್ತು ಜ್ಯೋತಿಷ್ಯ ಶಾಸ್ತ್ರದಲ್ಲಿ ಪರಿಣಿತರು' ಎಂಬ ವಿಷಯ ವೈದಿಕ ಬ್ರಾಹ್ಮಣದಿಂದ ತಿಳಿದುಬಂತು.

ಹೀಗಾಗಿ ವೆಂಕಟೇಶಾಚಾರ್ಯರನ್ನು ಜೋತಿಷ್ಯ ಶಾಸ್ತ್ರದ ಅಧ್ಯಯನಕ್ಕಾಗಿ ಧರ್ಮಭಟ್ಟರಲ್ಲಿಗೆ ಕಳಿಸಿದರು. ಏಕಗ್ರಾಹಿ ಮತ್ತು ಮಧ್ವರು ರಚಿಸಿದ ಗ್ರಂಥಗಳ ಅಧ್ಯಯನ ಮಾಡಿದ ಶಿಷ್ಯ ದೊರೆತದ್ದು ಧರ್ಮಭಟ್ಟರಿಗೆ ಬಹಳ ಆನಂದವಾಯಿತು. ಮೂರು ವರ್ಷ ಜೋತಿಷ್ಯ ಶಾಸ್ತ್ರದ ಮತ್ತು ಇನ್ನು ಅನೇಕ ಗ್ರಂಥಗಳ ಅಧ್ಯಯನದ ಬಳಿಕ ಸಂತೋಷದಿಂದ ಆಶೀರ್ವದಿಸುತ್ತ, "ವೆಂಕಟೇಶಾಚಾರ್ಯ, ನೀನು ನನಗೆ ಶಿಷ್ಯನಾಗಿ ದೊರೆಕಿದ್ದು ನನ್ನ ಪೂರ್ವ ಜನ್ಮದ ಪುಣ್ಯ. ಹೇಳಿದ ಎಲ್ಲ ವಿಷಯವನ್ನು ಸರಿಯಾಗಿ ಗ್ರಹಿಸಿರುವಿ. ಜ್ಞಾನಾರ್ಜನೆಮಾಡುವ, ಹೊಸ ಹೊಸ ವಿದ್ಯೆಯನ್ನು ಕಲಿಯುವ ಮತ್ತು ಅದನ್ನು ಜೀವನದಲ್ಲಿ ಅಳವಡಿಸಿಕೊಳ್ಳಬೇಕೆನ್ನುವ ನಿನ್ನ ಉತ್ಕಟ ಇಚ್ಛೆ ನನಗೆ ಬಹಳ ಹಿಡಿಸಿದೆ. ನಿನ್ನಲ್ಲಿ ಮಾರ್ಗದರ್ಶಕನಿಗೆ ಇರಬೇಕಾದ ಎಲ್ಲ ಗುಣಗಳು ಇವೆ. ಯಾವುದೇ ಕಷ್ಟಗಳು ಎದುರಾದಾಗ ಸಹನೆಯಿಂದ ಎದುರಿಸುವ ಗುಣ ನಿನ್ನಲ್ಲಿದೆ. ಕಷ್ಟಗಳನ್ನು ಹೋಗಲಾಡಿಸಲು ಉಪಾಯವನ್ನು ಅರಸುತ್ತ ತಪಸ್ಸನ್ನು ಮಾಡು ಅಂದರೆ ಎಲ್ಲ ಕಠಿಣ ಕೆಲಸಗಳು ಸುಗಮವಾಗಿ ಕೈಗೂಡುತ್ತವೆ."ಎಂದು ನುಡಿದರು.

ಮರಳಿ ಸುರಪುರಕ್ಕೆ ಹೋಗುವ ಪೂರ್ವದಲ್ಲಿ ಮಂಚಾಲೆಯ ಶ್ರೀರಾಘವೇಂದ್ರ ಯತಿವರ್ಯರ ದರ್ಶನಮಾಡಿಕೊಳ್ಳಬೇಕೆಂದು ಗುರು ಶಿಷ್ಯರಿಬ್ಬರೂ ಉಳಿದ ಶಿಷ್ಯರೊಂದಿಗೆ ಮಂಚಾಲೆಗೆ ಹೋದರು. ತುಂಗಭದ್ರೆಯಲ್ಲಿ ಆಹ್ನಿಕಗಳನ್ನು ಮುಗಿಸಿ ಶ್ರೀರಾಘವೇಂದ್ರ ಸ್ವಾಮಿಗಳ ದರ್ಶನ ಪಡೆದರು. ಬಳಿಕ ಪೀಠಾಧಿಕಾರಿಗಳಾದ ಶ್ರೀ ಭುವನೇಂದ್ರ ತೀರ್ಥರ (1785–1799) ದರ್ಶನಪಡೆದರು. ಶ್ರೀಪಾದಂಗಳವರು ಶ್ರೇಷ್ಠ ವೇದವೇದಾಂಗ ಪಂಡಿತರಾದ, ಜೋತಿಷ್ಯ ಶಾಸ್ತ್ರದಲ್ಲಿ ಪರಿಣಿತರಾದ ಶ್ರೀಧರ್ಮಭಟ್ಟರನ್ನು ಬಹಳ ಪ್ರೀತಿಯಿಂದ ಕಂಡು ಮಾತನಾಡಿಸಿದರು. ಆದರೆ ತೀರ್ಥ ಪ್ರಸಾದ ಸ್ವೀಕರಿಸುವ ಸಮಯದಲ್ಲಿ ಮಠದಲ್ಲಿರುವ ಪಂಡಿತರಿಂದ ಆದ ತಾರತಮ್ಯದಿಂದಾಗಿ ಮನನೊಂದು ಪ್ರಸಾದ ಸ್ವೀಕರಿಸದೇ ಮರಳಿ ಆದವಾನಿಗೆ ಬಂದರು. ಈ ತಾರತಮ್ಯ ಭಾವವು ತೊಲಗುವ ಲಕ್ಷಣಗಳಿಲ್ಲವೆಂದು ಇಬ್ಬರಿಗೂ ಮನದಟ್ಟಾಯಿತು. ಮಠದ ಸ್ವಾಮಿಗಳ ಮಾತನ್ನೇ ಪಂಡಿತರು ಪಾಲಿಸದಿದ್ದರೆ ತಮ್ಮದೇ ಮಠವೆಂದು ಬಂದ ಕಾಣ್ವಶಾಖಿಯರಿಗೆ ಮಠ ಯಾವುದು? ನಮ್ಮ ಶಾಖೆಯ ಜನರಿಗಾಗಿಯೇ ಒಂದು ಮಠವಿದ್ದರೆ ಚೆನ್ನಾಗಿರುತ್ತಿತ್ತಲ್ಲವೇ? ಎಂಬ ಚಿಂತೆಯು ಅವರಿಗೆ ಕಾಡತೊಡಗಿತು. (ಈ ವಿಷಯವನ್ನು ಶ್ರೀವಾಮನತೀರ್ಥರ ವಂಶಜರಾದ ಶ್ರೀಮಧ್ವಾಚಾರ್ಯರು 1984ರಲ್ಲಿ ನನಗೆ ಹೇಳಿದ್ದು.)

ವೆಂಕಟೇಶಾಚಾರ್ಯರು ವೇದವೇದಾಂಗ ಪಾರಂಗತರೆಂದು, ಶ್ರೇಷ್ಠ ಪುರೋಹಿತರೆಂದು ಮತ್ತು ಜೋತಿಷ್ಯ ಶಾಸ್ತ್ರ ಪರಿಣಿತರೆಂದು ಪ್ರಸಿದ್ಧಿಯಾಯಿತು. ಸುರಪುರ ನಗರದ ದೊರೆಗಳಿಂದ ರಾಜಾಶ್ರಯವೂ, ಮುಜುಮದಾರ ಭಾಸ್ಕರರಾಯ

ಇವರಿಂದ ಪ್ರೋತ್ಸಾಹವೂ ಮತ್ತು ಬ್ರಾಹ್ಮಣರಿಂದ ಬೆಂಬಲವೂ ದೊರಕಿತು, ಇವರು ಹೇಳುವ ಜೋತಿಷ್ಯ ಸತ್ಯವಾಗುವುದೆಂದು ಮತ್ತು ಕಷ್ಟಗಳಿಗೆ ಸರಿಯಾದ ಪರಿಹಾರ ಉಪಾಯವನ್ನು ಸೂಚಿಸುವರೆಂಬ ಸುದ್ದಿ ಜನಜನಿತವಾಯಿತು, ಹೀಗಾಗಿ ಬದುಕು ಸುಗಮವಾಗಿ ಸಾಗುತ್ತಿರಲು ತಂದೆತಾಯಿಗಳು ಸುಯೋಗ್ಯ ಅಪರಂಜಿಯಂತಹ ಕನ್ಯೆಯನ್ನು ಹುಡುಕಿ ಸಂಭ್ರಮದಿಂದ ಮದುವೆಮಾಡಿದರು. ಒಂದು ವರ್ಷ ತುಂಬುವುದರೊಳಗಾಗಿ ಸೊಸೆಯು ಒಂದು ಸುಂದರ ಹೆಣ್ಣುಮಗುವಿಗೆ ಜನ್ಮನೀಡಿದಳು. (ಈ ವಿಷಯವನ್ನು ಬೆಂಗಳೂರು ರಾಜಾಜಿನಗರದಲ್ಲಿದ್ದ ಮಾಧವಾಚಾರ ರಾಜಗೋಪಾಲಾಚಾರ ಕನಕಗಿರಿ ಇವರು 2012ರಲ್ಲಿ ನನಗೆ ಹೇಳಿದ್ದು.)

ವೆಂಕಟೇಶಾಚಾರ್ಯರ ವೇದಾಧ್ಯಾಯನ, ಶಾಸ್ತ್ರದ ಅಧ್ಯಯನ ನಿರಂತರ ಸಾಗಿತ್ತು. ಪ್ರತಿದಿನ ಬ್ರಾಹ್ಮೀಮುಹೂರ್ತದಲ್ಲಿ ಎದ್ದು ಆದಿಶೇಷನ ಧ್ಯಾನಮಾಡಿ, ಸ್ನಾನ ಸಂಧ್ಯಾವಂದನೆ, ದೇವರಪೂಜೆ, ವೈಶ್ವದೇವ, ಬ್ರಹ್ಮಯಜ್ಞ ಮುಂತಾದವುಗಳನ್ನು ಶಾಸ್ತ್ರದ ಅನುಸಾರವಾಗಿಯೇ ಮಾಡುತ್ತಿದ್ದರು. ಆದರೂ ಅವರ ಮನಸ್ಸಿಗೆ ಸಮಾಧಾನವಿರಲಿಲ್ಲ. ಮಂಚಾಲಿಯಲ್ಲಿ  ಆದ ಅವಮಾನದ ಘಟನೆ ಅವರನ್ನು ವಿಚಲಿತರನ್ನಾಗಿ ಮಾಡಿತ್ತು. ಕಾಣ್ವಶಾಖೆಯ ದ್ವೈತ ಸಂಪ್ರದಾಯದವರಿಗೆ ತಮ್ಮದೇ ಆದ ಒಂದು ಮಠವಾಗಬೇಕು ಎಂಬ ಚಿಂತೆ ಕಾಡುತ್ತಲಿತ್ತು.

"ಹುರಸಗುಂಡಿಗಿ ಗ್ರಾಮದ ಕಾಣ್ವಶಾಖೀಯ ನಾಡಗೌಡರ ಮನೆತನದಲ್ಲಿ ಜನಿಸಿದ ದುಂಡೋಪಂತರು (ನಾ.ಶ್ರೀ ರಾಜಪುರೋಹಿತರ ಸಂಶೋಧನಾ ಲೇಖನಗಳು.) ಮುಂದೆ ಯತಿದೀಕ್ಷೆಯನ್ನು ಶ್ರೀ ಅಕ್ಷೋಭ್ಯತೀರ್ಥ ಸ್ವಾಮಿಗಳವರಿಂದ ಪಡೆದು ಜಯತೀರ್ಥರಾಗಿ ನಾಮಕರಣಗೊಂಡ ಮೇಲೆ ಕಾಣ್ವಶಾಖೀಯರಾದ ಭಾಗವತ ಸಂಪ್ರದಾಯದ ನಾವು ವೈಷ್ಣವ ದೀಕ್ಷೆಯನ್ನು ಪಡೆದು ಮಧ್ವ ಪರಂಪರೆಯನ್ನು ಅಳವಡಿಸಿಕೊಂಡೆವು. ನಾವು ಮಾಧ್ವ ಸಂಪ್ರದಾಯದವರಾಗಿದ್ದರೂ ಅನ್ಯಮಾಧ್ವಪರಂಪರೆಯ ಮಠದವರು ಕಾಣ್ವ ಶಾಖೀಯರನ್ನು ತಾರತಮ್ಯ ಭಾವದಿಂದ ಕಾಣುವುದಕ್ಕೆ ವೈದಿಕ ಸಾಹಿತ್ಯದಲ್ಲಿ ಯಾವುದೇ ಪುರಾವೆಗಳಿಲ್ಲ. ಆದರೂ ಹೀಗೇಕೆ? ನಮ್ಮವರು ಸ್ವಾಭಿಮಾನದಿಂದ ಬದುಕುವಂತಾಗಬೇಕು" ಎನ್ನುವ ಮನದಲ್ಲಿಯ ಚಿಂತೆಯು ಅವರನ್ನು ಖಿನ್ನತೆಗೆ ನೂಕುತಿತ್ತು.

ಚಿಂತೆಯು ಅತಿಯಾಗಿ ಖಿನ್ನತೆಯು ಆವರಿಸಿದಾಗ ಶೇಷದೇವನ ಮತ್ತು ಲಕ್ಷ್ಮೀಶನಧ್ಯಾನ  ಮಾಡುತ್ತ ಕುಳಿತುಕೊಳ್ಳುತ್ತಿದ್ದರು. ಕೆಲವೊಮ್ಮೆ ಚಿಂತೆಯಲ್ಲಿರುವಾಗ ರಾತ್ರಿ ಸರಿದದ್ದೇ ಗೊತ್ತಾಗುತ್ತಿರಲಿಲ್ಲ. ಒಮ್ಮೊಮ್ಮೆ ಅವರ ಪತ್ನಿಯು" ನಿಮ್ಮ ಚಿಂತೆಯ ಮೂಲಕಾರಣ ನನಗೆ ತಿಳಿದಿದೆ. ನಿಮ್ಮ ಚಿಂತೆಗೆ ನಿಮ್ಮ ಉಪಾಸ್ಯ ಮೂರ್ತಿ ಶೇಷದೇವನು ಏನಾದರೊಂದು ಪರಿಹಾರ ಸೂಚಿಸುತ್ತಾನೆ. ನೀವು ಮುಂದೆ ತೆಗೆದುಕೊಳ್ಳುವ ನಿರ್ಧಾರಗಳಿಗೆ ನನ್ನ ಪೂರ್ಣ ಬೆಂಬಲವಿದೆ. ನೀವು ನನಗಾಗಿ, ನನ್ನ ಹೆಣ್ಣು ಮಗುವಿಗಾಗಿ ಚಿಂತಿಸುತ್ತಿಲ್ಲವೆಂಬ ಅರಿವು ನನಗಿದೆ. ನಿಮ್ಮದು ಸಮಾಜವನ್ನು ಉದ್ಧರಿಸುವ ಮತ್ತು ಸಮಾಜ ಬಾಂಧವರಲ್ಲಿ ಆತ್ಮ ವಿಶ್ವಾಸವನ್ನು ಕುದುರಿಸುವ ಕಾರ್ಯದ ಚಿಂತನೆ ಇದೆ. ಮಧ್ಯರಾತ್ರಿಯಾಯಿತು ಮಲಗಿಕೊಳ್ಳಿ" ಎಂದು ಹೇಳುತ್ತಿದ್ದಳು.

ಒಂದು ದಿನ ಶೇಷದೇವರನ್ನು ನೆನೆದು ಮಲಗಿಕೊಂಡಾಗ ವೆಂಕಟೇಶಾಚಾರ್ಯರು ಒಂದು ಕನಸನ್ನು ಕಂಡರು. ಕನಸಿನಲ್ಲಿ ಶೇಷದೇವರು ಪ್ರತ್ಯಕ್ಷವಾಗಿ ಹೀಗೆ ಆಜ್ಞಾಪಿಸಿದನು.''ಆಚಾರ್ಯ ಶಿಖಾಮಣೀ, ಕಾಣ್ವ ಸಮಾಜೋದ್ಧಾರದ ಹಾಗೂ ಶ್ರೀವಿಷ್ಣು ಉಪಾಸನೆಯನ್ನು ಪ್ರಸಾರ ಮಾಡಬೇಕೆನ್ನುವ ನಿನ್ನ ಮಹತ್ವಾಕಾಂಕ್ಷೆಯು ಫಲದ್ರೂಪವನ್ನು ಹೊಂದುವ ಯೋಗಾಯೋಗವು ಸಮೀಪಿಸಿರುವುದು. ಇನ್ನೂ ತುಸು ದಿವಸಗಳಲ್ಲಿ ವಾಯ್ವಂಶ ಸಂಭೂತರಾದ ಮಹಾತಪಸ್ವಿಗಳ ದರ್ಶನವು ನಿನಗಾಗುವುದು. ಅವರಿಂದ ನೀನು ಈ ಜನ್ಮವನ್ನು ಬಿಟ್ಟು ಬೇರೊಂದು ಜನ್ಮವನ್ನು ಹೊಂದುವೆ. ಅವರು ನಿನಗೆ ಶ್ರೀವಾಯುದೇವರು ಪ್ರಸಾರಮಾಡಿದ ವಿಷ್ಣುಭಕ್ತಿಪ್ರಸಾರದ ಕಾರ್ಯವನ್ನು ವಹಿಸುವರು. ಅದನ್ನು ನೀನು ಜರುಗಿಸಿ ಧನ್ಯನಾಗು. ಪರಮಪದವನ್ನು ಹೊಂದು". ಕನಸಿನಿಂದ ಎಚ್ಚರವಾದ ಬಳಿಕ ಅಂಗಳಕ್ಕೆ ಬಂದು ಆಕಾಶದ ಕಡೆ ನೋಡಲಾಗಿ ಬೆಳ್ಳಿಚುಕ್ಕೆ ಮೂಡಿದ್ದು ಕಾಣಿಸಿತು. ದಿನದಂತೆ ಬ್ರಾಹ್ಮೀ ಮುಹೂರ್ತದಲ್ಲಿ ಎಚ್ಚರವಾಗಿದೆಯಂದರಿತು ಬೆಳಗಿನ ಆಹ್ನಿಕಗಳನ್ನು ಪ್ರಾರಂಭಿಸಿದರು. ಆದಿಶೇಷನು ಪ್ರತ್ಯಕ್ಷ ದರ್ಶನಕೊಟ್ಟು ಹೀಗೆ ಆಜ್ಞಾಪಿಸಿರುವುದನ್ನು ನೆನೆದು ಅವರ ಮನಸ್ಸು ಆನಂದದಿಂದಲೂ ಆಶ್ಚರ್ಯದಿಂದಲೂ ತುಯ್ದಾಡಿತು. ಬಳಿಕ ತಮ್ಮ ಪ್ರಿಯ ಧರ್ಮಪತ್ನಿಗೆ ಸ್ವಪ್ನದ ಮೂಲಕ ಆದ ದೃಷ್ಟಾಂತವನ್ನು ವಿವರಿಸಿದರು. ಅದನ್ನುಕೇಳಿ ತನ್ನ ಪತಿಯು ಕಾಣ್ವ ಸಮಾಜದಲ್ಲಿ ವಿಷ್ಣುಭಕ್ತಿಯನ್ನು ಪ್ರಸಾರಮಾಡುವ ಮತ್ತು ಕಾಣ್ವ ಸಮಾಜಕ್ಕೆ ಮಾರ್ಗದರ್ಶನ ಕೊಡುವ ಮಹತ್ತರ ಜವಾಬ್ದಾರಿಯನ್ನು ಹೊರುವ ಅಸಾಮಾನ್ಯ ವ್ಯಕ್ತಿಯೆಂಬುದನ್ನು ನೆನೆದು ಅಭಿಮಾನಪಟ್ಟಳು. ತಮಗೆ ಮುಂದೆ ಪತಿಯೊಂದಿಗೆ ಬಾಳಿಬದುಕುವ ಸಮಯ ಸಿಗದಿದ್ದರೇನು? ಸಮಸ್ತ ಕಾಣ್ವ ಸಮಾಜವು ತಮ್ಮ ಪತಿಯಿಂದಾಗಿ ಅಭಿಮಾನದಿಂದ ಆತ್ಮಗೌರವದೊಂದಿಗೆ ಬಾಳಿಬದುಕುವ ಕಾಲ ಬರುವುದೆಂದು ತಿಳಿದು ಆಶಾವಾದಿಯಾದಳು.

ತಮ್ಮ ಆಹ್ನಿಕಗಳನ್ನು ತೀರಿಸಿಕೊಂಡ ಮೇಲೆ ಸ್ವಪ್ನದ ಮೂಲಕ ತಮಗಾದ ದೃಷ್ಟಾಂತವನ್ನು ಸುರಪುರದ ಕಾಣ್ವಶಾಖೆಯ ಮುಂದಾಳುಗಳಾದ ಮತ್ತು ಷಡ್ರಥಿಕರೆಂದು ಹೆಸರಾದ ವೇದಮೂರ್ತಿ ಶಾಸ್ತ್ರ ಸಂಪನ್ನರಾದ ದೇವಪುರ ಶ್ರೀನಿವಾಸಾಚಾರ್ಯ, ಅಗ್ನಿಹೋತ್ರಿ ಭೀಮಾಚಾರ್ಯ, ದಾನಾಧ್ಯಕ್ಷ ರಾಮಾಚಾರ್ಯ, ರಾಜಪುರೋಹಿತ ತಿಮಣಾಚಾರ್ಯ, ಅಗ್ನಿವರದಾಚಾರ್ಯ, ಕನಕಗಿರಿ ತಿಮ್ಮಣ್ಣಾಚಾರ್ಯರೆಂಬ ಪ್ರಮುಖರಿಗೆ ತಿಳಿಸಿದರು. ಇವರೆಲ್ಲರೂ ಕಾಣ್ವಶಾಖೆಯ ಉನ್ನತಿಯನ್ನು ಬಯಸುವವರು ಮತ್ತು ಯಾಜ್ಞವಲ್ಕ್ಯ ಪ್ರಣೀತ ಶುಕ್ಲಯಜುರ್ವೇದ ಪರಂಪರೆಯನ್ನು ರಕ್ಷಿಸುವ ಕಳಕಳಿಯುಳ್ಳವರಾಗಿದ್ದರು. ಸ್ವಪ್ನದ ದೃಷ್ಟಾಂತವನ್ನು ಕೇಳಿ ಎಲ್ಲರಿಗೂ ಬಹಳ ಸಂತೋಷಾವಾಯಿತು" ಇದು ನೀವು ಯತಿ ಆಶ್ರಮವನ್ನು ಹೊಂದುವ ಮುನ್ಸೂಚನೆ. ನಾವು ಕಾಯ್ದು ನೋಡಬೇಕು. ನಮ್ಮ ದ್ವೈತ ಕಾಣ್ವ ಸಮಾಜದ ಏಳಿಗೆಗಾಗಿ ಮತ್ತು ಒಕ್ಕಟ್ಟಿಗಾಗಿ ಯತಿ ಆಶ್ರಮವನ್ನು ಪಡೆದು, ಅವರಿಗಾಗಿ ಒಂದು ಮಠವನ್ನು ಸ್ಥಾಪಿಸುವ ಮುನ್ಸೂಚನೆ ಎನ್ನಬಹುದು.

ವೇದಕಾಲದ ದ್ವೈತ ತತ್ವದ [ತತ್ವಾರ್ಥ:–''ಮೂಲತಃ ಕಾಣ್ವಶಾಖಿಯರೆಲ್ಲರು ದ್ವೈತಿಗಳೇ ಮತ್ತು ವೈಷ್ಣವರೇ.] ಶ್ರೀಮದಾನಂದ ತೀರ್ಥರು ಅವತರಿಸುವುದಕ್ಕಿಂತ ಮುಂಚೆಯೇ ಅಂದರೆ ವೇದಕಾಲದಲ್ಲಿಯೇ ಯಾಜ್ಞವಲ್ಕ್ಯ ಮಹರ್ಷಿ ಪ್ರವರ್ತಿತ

ಆದಿತ್ಯ ಸಂಪ್ರದಾಯದ ಕಾಣ್ವ ಶಾಖೀಯರು, ಮಾಧ್ಯಾಂದಿನ ಶಾಖೀಯರು ಮತ್ತು ಗಾಲವ ಶಾಖಿಯರು ಅಷ್ಟೇ ಏಕೆ ಉಳಿದ ಎಲ್ಲ ಶಾಖೆಯವರೂ ದ್ವೈತಿಗಳೇ ಮತ್ತು ವೈಷ್ಣವರೇ. ನಮ್ಮ ಬೃಹದಾರಾಣ್ಯಕ ಉಪನಿಷತ್ತಿನ ಕಾಣ್ವಪಾಠದ ಮಂತ್ರ" 'ವಿಜ್ಞಾನಾದಂತರ ಇತಿ ಕಾಣ್ವಾಃ' ಎಂದು ಇದೆ. ಅಂದರೆ ಜೀವನಿಂದ ಪರಮಾತ್ಮನು ಭಿನ್ನನಾಗಿದ್ದಾನೆ ಎಂದು. ಇದನ್ನು ಆ ಕಾಲದ ಎಲ್ಲ ಶುಕ್ಲಯಜುರ್ವೇದಿಗಳು ನಂಬಿದ್ದರು. ಬೃಹದಾರಣ್ಯಕ ಉಪನಿಷತ್ತಿನ ಮಾಧ್ಯಂದಿನ ಪಾಠದ ಮಂತ್ರ" ಆತ್ಮನೋಂತರ ಇತಿ ಮಾಧ್ಯಾಂದಿನಾಃ" ಎಂದು ಇದೆ. ಜೀವನಿಂದ ಪರಮಾತ್ಮನು ಭಿನ್ನನಾಗಿದ್ದಾನೆ ಎಂದು. ಇದನ್ನು ಆ ಕಾಲದ ಎಲ್ಲ ಮಾಧ್ಯಾಂದಿನ ಶಾಖೀಯ ಬ್ರಾಹ್ಮಣರು ಹೇಳಿದ್ದಾರೆ ಮತ್ತು ನಂಬಿದ್ದಾರೆ.

ಇನ್ನು ಬೃಹದಾರಣ್ಯಕ ಶತಪಥ ಬ್ರಾಹ್ಮಣ ನವಖಂಡದಲ್ಲಿ 'ಅಥ ಕಾತ್ಯಾಯನೀ ಹೋವಾಚ" ಎನ್ನುವುದರಿಂದ ಆರಂಭಿಸಿ, ತಪ್ತ ಮುದ್ರಾಧಾರಣೆಯ ವಿಷಯವನ್ನು ವಿವರಿಸುವ ಪ್ರಮಾಣವಿರುವುದು. ಯಾಜ್ಞವಲ್ಕ್ಯರು ತಮ್ಮ ಪತ್ನಿಯರಿಬ್ಬರಿಂದ ಸಹಿತವಾಗಿ, ಅಂತೇವಾಸಿಗಳನ್ನು ಕುರಿತು ನುಡಿಯುತ್ತಾರೆ. 'ಹೇ, ಸುಶ್ಲೋಕಮೌಲೇ, ಉತ್ತಮ ಚರಿತನಾದ ಶಿಷ್ಯ ಕಣ್ವ ಋಷಿಯೇ, ಆತ್ಮಹಿತಾಯ = ಜೀವನು ತನ್ನ ಸ್ವರೂಪಾನಂದಾವಿರ್ಭಾವ ರೂಪವಾದ ಮುಕ್ತಿಯಗೋಸ್ಕರವಾಗಿ, ತಸ್ಮಾತ್ = ಸ್ವಸ್ವಗೃಹ್ಯೋಕ್ತ ವಿಧಾನಗಳಿಗನುಗುಣವಾಗಿ, ವರ್ಮಾಣಿ = ತಮ್ಮ ತಮ್ಮ ಅವಯವಗಳಲ್ಲಿ, ಅಗ್ನಿನೇಮಿನಾ= ಅಗ್ನಿಯಿಂದ ಸಂತಪ್ತವಾದ ಚಕ್ರದ ಅಲಗುಗಳಿಂದ (ತಪ್ತ ಚಕ್ರಚಿನ್ಹೆಯಿಂದ), ಚಕ್ರಂ = ಚಕ್ರಚಿನ್ಹೆಯು, ಧಾರ್ಯಂ = ಧರಿಸಲ್ಪಡಬೇಕು, ಸಂತತಃ = ತಪ್ತಮುದ್ರಾಧಾರಣಾನಂತರದಲ್ಲಿ ಯಾವಾಗಲೂ ಸಹ, ಹರಿಂ = ಹರಿಯನ್ನು, ಭಜೇತ = ಶ್ರವಣ, ಮನನ, ಕೀರ್ತನ, ನಿಧಿಧ್ಯಾಸನಗಳಿಂದ ಭಜಿಸಿ, ಸೇವಿಸಬೇಕು. ಇದರಿಂದ ಚಕ್ರಾದಿ ತಪ್ತ ಮುದ್ರಾಧಾರಣವು ಅವಶ್ಯ ಕರ್ತವ್ಯವೆಂದು ಸಿದ್ಧವಾಗುವುದು. (ಇದನ್ನು "ಕಾಣ್ವಚಾರ ದರ್ಶನ" ಗ್ರಂಥದಿಂದ ಆಯ್ದುಕೊಳ್ಳಲಾಗಿದೆ.)

ಅದಲ್ಲದೆ ಶ್ರೀ ಶುಕ್ಲಯಜುರ್ವೇದ ಗಾಲವ ಶತಪಥಾಂತರ್ಗತ ಚಕ್ರಬ್ರಾಹ್ಮಣದಲ್ಲಿ, "ಅಥ ಕಾತ್ಯಾಯನೇತಿ ಹೋವಾಚ ಜ್ಞಾನಂವೈ ಪುರುಷೋ ಬ್ರಹ್ಮಜಾಯತೇಸವೈಸಬ್ರಾಹ್ಮಣೋಭವತಿ, ವಸಿಷ್ಠಃ ಕಸ್ಯಪೋತ್ರಿರ್ಜಮದ ಗ್ನಿರ್ವಿಶ್ವಾಮಿತ್ರೋಯಂ ವ್ಯಾಸಃಪಾರಾಶರ್ಯಸನಕಾದಯೋ ದೇವಾ ಸಬ್ರಹ್ಮಲೋಕೋ ಭವತಿ ತಪ್ತಂ ಚಕ್ರಂ ದ್ವಿಭುಜೇ ಧಾರ್ಯಮಿತಿ ಸ ಪುಣ್ಯಲೋಕೋ ಭವತಿ ಸ ವಿಷ್ಣುಲೋಕೋ ಭವತಿ ಸ ವೈ ಪುಣ್ಯಲೋಕೇ ಭವತಿಯ ಏವಂ ವೇದ॥ – 2

"ಅಥ ಕಾತ್ಯಾಯನೇತಿ ಹೋವಾಚಾದಿತ್ಯ ಪುರುಷಃ ಸ ಆದಿತ್ಯಃ ಕಸ್ಮಿನ್ಪ್ರತಿಷ್ಠಿತಃ ಚಾಧ್ಯಾತ್ಮಾ ಚ ಪ್ರತಿಷ್ಠಿತಂ ವೇದ ಪ್ರತಿಷ್ಠತಿ ಪ್ರಜಯಾ ಪಶುಭಿರ್ಯಸ್ಮಿನ್ಲೋಕೇಮೃತತ್ವಮಿತಿ ಪಾಪಂ ಹರತಿ ಸುದರ್ಶನಂದಾರ್ಯಂ ಇತ್ಯೂರ್ಧ್ವಪುಂಡ್ರಂ ದ್ವಿರೇಖಂ ಭವತಿ, ಬ್ರಹ್ಮಣಸ್ಸಾಯುಜ್ಯಗಂ ಸಲೋಕತಾಂ ಜಯಂತಿಯ ಏವಂವೇದ" – 3

ಈ ರೀತಿಯ ಉಲ್ಲೇಖವಿದೆ. ಇದರ ಮೇಲಿಂದ ವೇದಾಕಾಲದಲ್ಲಿಯೇ ತಪ್ತ ಚಕ್ರಧಾರಣ ಮತ್ತು ಊರ್ಧ್ವಪುಂಡ್ರಧಾರಣ ಇತ್ತೆಂದು ತಿಳಿದುಬರುತ್ತದೆ. ದ್ವೈತ ತತ್ವದ ಆಧಾರದ ಮೇಲೆಯೇ ನಮ್ಮದೊಂದು ಮಠವು ಶ್ರೀ ದೇವಪುರದ ವೆಂಕಟೇಶಾಚಾರ್ಯರಿಂದ ಸ್ಥಾಪಿತವಾಗಬಹುದೆಂದು ಅನಿಸುತ್ತದೆ." ಎಂಬ ವಿಚಾರವನ್ನು ಎಲ್ಲ ಷಡ್ರಥಿಕರು ವ್ಯಕ್ತಪಡಿಸಿದರು ಈ ವಿಷಯವನ್ನು ಸುರಪುರದಲ್ಲಿರುವ ವನದುರ್ಗದ ಮುಜುಮದಾರ ಭಾಸ್ಕರರಾಯನಿಗೂ ತಿಳಿಸಿದರು. ಏಕೆಂದರೆ ಇವನು ಕೂಡ ಬ್ರಾಹ್ಮಣ ಆಶ್ರಯ ದಾತನು ಮತ್ತು ಕಾಣ್ವಶಾಖೆಯ ಅಭಿಮಾನಿಯಾಗಿದ್ದನು.

ಕೆಲವು ದಿನಗಳನಂತರ ಶ್ರೀವಿಭುದೇಂದ್ರ ಸ್ವಾಮಿಯವರ ಪರಂಪರೆಯ ಶ್ರೀರಾಘವೇಂದ್ರಯತಿವರ್ಯರ ಮಠದ ಶ್ರೀ ಭುವನೇಂದ್ರ ತೀರ್ಥರು (1785–1799) ಸುರಪುರ ಪಟ್ಟಣಕ್ಕೆ ಆಗಮಿಸಿದರು. ಆಗ ಅಲ್ಲಿಯ ಕಾಣ್ವ ಸಮಾಜದವರು ಇವರಿಗೆ ಯೋಗ್ಯ ಮಾನ–ಮರ್ಯಾದೆಯನ್ನು ಮಾಡಿ ಕೃತಕೃತ್ಯರೆನಿಸಿಕೊಂಡರು. ಅವರು ಬಂದ ಸಂದರ್ಭದಲ್ಲಿ ಮಠದೊಳಗಿನ ಆಡಳಿತಗಾರರು ಕಾಣ್ವರನ್ನು ತಾರತಮ್ಯ ಭಾವದಿಂದ ಕಂಡುದುದಕ್ಕಾಗಿ ಕಾಣ್ವರ ಮನಸ್ಸು ಬಹಳ ನೊಂದುಹೋಯಿತು. ಇದು ವಿಕೋಪಕ್ಕೆ ಹೋಗಿ ಶ್ರೀಗಳವರಿಗೂ ತಲುಪಿತು. ಶ್ರೀಗಳವರು ಕಾಣ್ವ ಸಮಾಜದವರನ್ನು ಸಮಾಧಾನ ಪಡಿಸಿ, ಎರಡೂ ಬ್ರಾಹ್ಮಣ ಸಮಾಜದ ನಡುವೆ ಐಕ್ಯತೆ ತರಲು ಪ್ರಯತ್ನಿಸಿದರೂ ವಿಫಲವಾಯಿತು. ಈ ಘಟನೆಯೂ ದ್ವೈತಮತದ ಕಾಣ್ವರಿಗಾಗಿ ಮಠವನ್ನು ಸ್ಥಾಪಿಸಬೇಕೆನುವ ಭಾವಕ್ಕೆ ಇಂಬುಕೊಟ್ಟಿತು.

ಕೆಲವುದಿನಗಳು ಕಳೆದ ನಂತರ ಶ್ರೀಮದಾನಂದ ತೀರ್ಥರಿಂದ ಸ್ಥಾಪಿತವಾದ ಉಡುಪಿಯ ಅಷ್ಟಮಠಗಳಲ್ಲೊಂದಾದ ಶ್ರೀ ಶಿರೂರುಮಠದ ಇಪ್ಪತ್ಮೂರನೇ ಶ್ರೀಪಾದಂಗಳಾದ ಶ್ರೀಲಕ್ಷ್ಮೀ ಮನೋಹರ ತೀರ್ಥ ಶ್ರೀಪಾದಂಗಳು ಸುರಪುರ ಪಟ್ಟಣಕ್ಕೆ ದಯಮಾಡಿಸುವರೆಂಬ ವಿಷಯವು ತಿಳಿದುಬಂತು. ಆಗ ಸುರಪುರದ ಬ್ರಹ್ಮವೃಂದಕ್ಕೆ ಪರಮಾನಂದವಾಯಿತು. ಪೂರ್ವ ನಿಯೋಜಿತ ಕಾರ್ಯಕ್ರಮದಂತೆ ಶ್ರೀಪಾದಂಗಳ ಸುಖಾಗಮನವು ಸುರಪುರಕ್ಕೆ ಶುಭಮೂಹೂರ್ತದಲ್ಲಿ ಆಯಿತು. ಅವರ ಪೂಜೆ ಭಿಕ್ಷೆಬಂಧನಾದಿಗಳಿಗೆ ಯೋಗ್ಯ ವ್ಯವಸ್ಥೆಮಾಡಿ ತಮ್ಮ ಸೇವೆಯನ್ನು ಸಲ್ಲಿಸಿದರು. ಇವರೆಲ್ಲರಲ್ಲಿ ಕಾಣ್ವಶಾಖೆಯ ಷಡ್ರಥಿಕರೂ, ಮುಜುಮದಾರ ಭಾಸ್ಕರರಾಯರು ಮತ್ತು ದೇವಪುರದ ಶ್ರೀ ವೆಂಕಟೇಶಾಚಾರ್ಯರು ಪ್ರಮುಖರಾಗಿದ್ದರು.

ಈ ಸಂದರ್ಭದಲ್ಲಿ ವೇದವೇದಾಂಗ ಪಂಡಿತರಾದ, ತೇಜಃಪುಂಜ ಮುಖವುಳ್ಳ ಮತ್ತು ಶಾಂತಸ್ವಭಾವದ ಶ್ರೀದೇವಪುರದ ವೆಂಕಟೇಶಾಚಾರ್ಯರ ಸದ್ವರ್ತನೆ ಶ್ರೀಪಾದಂಗಳಿಗೆ ಮೆಚ್ಚುಗೆಯಾಯಿತು. ಬಳಿಕ ಅವರೊಂದಿಗೆ ಮಧ್ವಾಚಾರ್ಯರ ಮೂಲ ಗ್ರಂಥಗಳ ಮತ್ತು ಅವರು ಉಪನಿಷತ್ತುಗಳಿಗೆ ಬರೆದ ಭಾಷ್ಯಗಳ ಚರ್ಚೆಯಾಯಿತು. ಮಧ್ವರ ಗ್ರಂಥಗಳ ಬಗ್ಗೆ ವೆಂಕಟೇಶಾಚಾರ್ಯರಿಗೆ ಇರುವ ಅಪಾರ ಜ್ಞಾನವು ಶ್ರೀಪಾದಂಗಳಿಗೆ ತೃಪ್ತಿಯನ್ನು ತಂದುಕೊಟ್ಟಿತು.

ಕಾಣ್ವ ಸಮಾಜವು ನಿರಪೇಕ್ಷ ಭಕ್ತಿಯಿಂದ ಮತ್ತು ವಿಶ್ವಾಸದಿಂದ ಸೇವೆಮಾಡಿದ್ದು ಕಂಡು ಪರಮಾನಂದಗೊಂಡ ಶ್ರೀಪಾದಂಗಳು" ಈ ಪ್ರಾಂತವು ನಾರಾಯಣದೇವರ ಉಪಾಸನೆಗೆ, ವಿಷ್ಣುಭಕ್ತಿಗೆ ಮತ್ತು ಮಧ್ವಮುನಿಗಳ ತತ್ವಪ್ರಸಾರಕ್ಕೆ ಯೋಗ್ಯ ಸ್ಥಳವಾಗಿರುವುದು. ಅಲ್ಲದೆ ಇಲ್ಲಿಯ ಕಾಣ್ವ ಸಮಾಜವು ವಿಷ್ಣುಭಕ್ತಿಪರವಾಗಿಯೇ ಇರುವರು. ಇದಕ್ಕೆ ಪೂರಕವೆಂಬಂತೆ ಇಲ್ಲಿಯ ದೊರೆಯು ವಿಷ್ಣುಭಕ್ತನೇ ಇರುವನು. ಹೀಗಾಗಿ ವಿಷ್ಣುಭಕ್ತಿಯ ಮತ್ತು ಮಧ್ವತತ್ವಗಳ ಪ್ರಸಾರಕ್ಕೆ ಶಾಶ್ವತ ಉಪಾಯ ಕಂಡುಕೊಳ್ಳಬೇಕು" ಎಂದು ಆಲೋಚಿಸತೊಡಗಿದರು. ಹೀಗೆ ಆಲೋಚಿಸುತ್ತಾ ಮಲಗಿರಲು ಬೆಳಗಿನ ಜಾವದಲ್ಲಿ ಶ್ರೀಪಾದಂಗಳವರಿಗೆ ಕನಸಿನಲ್ಲಿ ಶ್ರೀಮನ್ನಾರಾಯಣನು ಮೈದಾಳಿ "ಯತಿಶ್ರೇಷ್ಠನೇ.....ನಿನ್ನ ಬಳಿಗೆ ನಾಳೆ ಆದಿಶೇಷನ ಅನುಗ್ರಹಕ್ಕೆ ಪಾತ್ರನಾದ ಪ್ರತಿಭಾಶಾಲಿಯಾದ ನನ್ನ ಭಕ್ತನೋರ್ವನು ಬರುವನು. ಅವನಿಗೆ ಅನುಗ್ರಹ ಮಾಡು. ಅವನೇ ಈ ಪ್ರಾಂತದಲ್ಲಿ ವಿಷ್ಣುಭಕ್ತಿಯನ್ನು ಪ್ರಸಾರಮಾಡಲು ಸಮರ್ಥನು. ಅವನಿಂದ ಲೋಕದಲ್ಲಿ ನಿನ್ನ ಕೀರ್ತಿಯು ಹೆಚ್ಚುವುದು" ಎಂದು ಆದೇಶಿಸಿ ಅದೃಶ್ಯನಾದನು.

ಶ್ರೀಪಾದಂಗಳವರಿಗೆ ಕೂಡಲೇ ಎಚ್ಚರವಾಯಿತು ತಮಗೆ ಕನಸಿನಲ್ಲಿ ಶ್ರೀಮನ್ನಾರಾಯಣನು ಮಾಡಿದ ಆದೇಶವನ್ನು ಕೇಳಿ ಬಹಳ ಆಶ್ಚರ್ಯವಾಯಿತು. ಬಳಿಕ ಶ್ರೀಪಾದಂಗಳು ಕಾಣ್ವಷಡ್ರಥಿಕರನ್ನು, ದೇವಪುರದ ವೆಂಕಟೇಶಾಚಾರ್ಯರನ್ನು ಮುಜುಮದಾರ ಭಾಸ್ಕರರಾಯನನ್ನು ಮತ್ತು ವಿದ್ವಾಂಸರನ್ನು ಕರೆಸಿ ತಮಗೆ ಬೆಳಗಿನ ಜಾವದಲ್ಲಿ ಬಿದ್ದ ಸ್ವಪ್ನದವಿಚಾರವನ್ನು ತಿಳಿಸಿದರು. ಶ್ರೀಪಾದಂಗಳು ತಮ್ಮ ಸ್ವಪ್ನದ ವಿಚಾರವನ್ನು ಹೇಳುತ್ತಿರಲು ನೆರೆದಿದ್ದ ಕಾಣ್ವ ಸಮಾಜದವರು, ಶ್ರೀಪಾದಂಗಳು ಸುರಪುರಕ್ಕೆ ಬರುವ ಪೂರ್ವದಲ್ಲಿ ದೇವಪುರದ ವೆಂಕಟೇಶಾಚಾರ್ಯರು ಕಂಡ ಕನಸಿನ ದೃಷ್ಟಾಂತದ ಬಗ್ಗೆ ಶ್ರೀಪಾದಂಗಳವರಿಗೆ ಭಕ್ತಿಯಿಂದ ಭಿನ್ನವಿಸಿಕೊಂಡರು, ಇದನ್ನು ಕೇಳಿ ಶ್ರೀಪಾದಂಗಳವರಿಗೂ ಆಶ್ಚರ್ಯವಾಯಿತು.

ಬಳಿಕ ಶ್ರೀಪಾದಂಗಳು ತಮಗೆ ಸ್ವಪ್ನದ ಮೂಲಕ ಆದ ಭಗವದಾಜ್ಞೆಯನ್ನು ಪರಿಪಾಲಿಸಲು, ಯತಿದೀಕ್ಷೆಯನ್ನು ನೀಡಿ ಕಣ್ವಮಠ ಸ್ಥಾಪನೆಮಾಡಲು ಸಿದ್ಧವಿರುವದಾಗಿ ಅಭಯಹಸ್ತ ನೀಡಿದರು. ಈ ಮಹತ್ವದ ಕಾರ್ಯ ನಡೆಯಲು ಉಡುಪಿ ಶ್ರೀಕೃಷ್ಣನ ಸನ್ನಿಧಾನವೇ ಯೋಗ್ಯ ಸ್ಥಳವೆಂದು, ತಾವೆಲ್ಲರೂ ಅಲ್ಲಿಗೆ ಬಂದು ಈ ಕಾರ್ಯವನ್ನು ನೆರವೇರಿಸಿಕೊಂಡು ಬರಬೇಕೆಂದು ಶ್ರೀಪಾದಂಗಳವರು ಆದೇಶಿಸಿದರು. ಭಾರತದ ತುಂಬೆಲ್ಲ ಕಣ್ವರ ಜಯಂತಿಯನ್ನು ಮಾಘ ಶುದ್ಧ ಪಂಚಮಿಯಂದು ಆಚರಿಸುತ್ತಾರೆ. ಹೀಗಾಗಿ ಅಂದೇ ಯತಿ ದೀಕ್ಷೆಯನ್ನು ನೀಡಿ, ಕಾಣ್ವ ದ್ವೈತ ಸಂಪ್ರದಾಯದವರಿಗಾಗಿ ಕಣ್ವಮಠ ಸ್ಥಾಪಯಾಗಿದೆಯೆಂದು ಘೋಷಿಸುವುದು ಸೂಕ್ತ' ಎಂದು ಶ್ರೀಪಾದಂಗಳವರು ಆಜ್ಞಾಪಿಸಿದರು.

ಬಳಿಕ ಸುರಪುರದ ಕಾಣ್ವ ಸಮಾಜವು ಶ್ರೀಪಾದಂಗಳವರ ಆಜ್ಞೆಯನ್ನು ಪರಿಪಾಲಿಸುವುದಾಗಿ ಹೇಳಿ ಅವರಿಗೆ ಯೋಗ್ಯ ಮಾನ. ಮಾರ್ಯಾದೆಗಳನ್ನು ಕೊಟ್ಟು ನಂತರ ತೀರ್ಥಪ್ರಸಾದಸ್ವೀಕರಿಸಿದರು. ಬಳಿಕ ಶ್ರೀಪಾದಂಗಳು ತಮ್ಮ ಶಿಷ್ಯರೊಂದಿಗೆ ಮುಂದಿನ ಊರಿಗೆ ಪ್ರಯಾಣ ಬೆಳೆಸಿದರು.

ವೆಂಕಟೇಶಾಚಾರ್ಯರಾದಿಯಾಗಿ ಎಲ್ಲರೂ ಎಲ್ಲ ವ್ಯವಸ್ಥೆಯನ್ನು ಮಾಡಿಕೊಂಡು ಮಾರ್ಗಶಿರ ಮಾಸದ ಒಂದು ಶುಭದಿನದಂದು ಹೊರಟರು. ಕಾಣ್ವಶಾಖೆಯ ಷಡ್‌ರಥಿಕರೊಂದಿಗೆ ಶ್ರೀ ವೆಂಕಟೇಶಾಚಾರ್ಯರು ಸನ್ಯಾಸ ದೀಕ್ಷೆಪಡೆಯಲು ಉಡುಪಿಗೆ ಹೋಗುವ ಕಾರ್ಯಕ್ರಮವನ್ನು ಇಮ್ಮಡಿ ವೆಂಕಟಪ್ಪನಾಯಕರಿಗೆ (ರಾಜ ದೇವಿಂದ್ರ ವೆಂಕಟಪ್ಪ ನಾಯಕ) ಇವರಿಗೂ ತಿಳಿಸಲಾಯಿತು. "ಸಗರ ನಾಡಿನಲ್ಲಿ ಬಹುಸಂಖ್ಯೆಯಲ್ಲಿರುವ ಕಾಣ್ವ ಶಾಖೀಯರಿಗಾಗಿ ಒಂದು ಮಠ ಸ್ಥಾಪಿತವಾಗುವುದು ಒಂದು ಮಹಾನ್ ಕಾರ್ಯ. ಈ ಧಾರ್ಮಿಕ ಕಾರ್ಯಕ್ಕೆ ನಮ್ಮ ಪೂರ್ಣಬೆಂಬಲ ಮತ್ತು ಸಹಕಾರವಿದೆ. ನಮ್ಮ ಉಪಾಸ್ಯ ಮೂರ್ತಿ ಗೋಪಾಲಸ್ವಾಮಿಯು, ಈ ಕಾರ್ಯಕ್ರಮವು ಸುಗಮವಾಗಿ ನೇರವೇರಲು ಅನುಗ್ರಹಿಸಲಿ ಎಂದು ಆಶಿಸುತ್ತೇವೆ" ಎನ್ನುವ ಸಂದೇಶವನ್ನು ದೊರೆಯು ಕಳಿಸಿದರು.

ಸುರಪುರದಿಂದ ಹೊರಟು 30–32 ದಿನಗಳ ದೀರ್ಘಪ್ರಯಾಣದ ನಂತರ ಪುಷ್ಯಮಾಸದ ಕೊನೆಯವಾರದಲ್ಲಿ ಉಡುಪಿಯನ್ನು ತಲುಪಿದರು. ಮರುದಿನ ಶಿರೂರುಮಠದ ಶ್ರೀಲಕ್ಷ್ಮೀಮನೋಹರ ತೀರ್ಥ ಶ್ರೀಪಾದಂಗಳವರು ಸುರಪುರದ ಕಾಣ್ವ ಸಮಾಜದವರು ಇಲ್ಲಿಗೆ ಬಂದ ಸದುದ್ದೇಶವನ್ನು ಮತ್ತು ಸುರಪುರದಲ್ಲಿ ನಡೆದ ಘಟನಾವಳಿಗಳನ್ನು ಎಲ್ಲ ಮಠಾಧೀಶರಿಗೆ ಅರುಹಿ, ದೇವಪುರದ ವೆಂಕಟೇಶಾಚಾರ್ಯರ ಪರಿಚಯವನ್ನು ಉಳಿದ ಎಲ್ಲ ಮಠಾಧೀಶರಿಗೂ ಮಾಡಿಕೊಟ್ಟರು. ಅಲ್ಲದೆ ವೆಂಕಟೇಶಾಚಾರ್ಯರಿಗೆ ನೀಡುವ ಯತಿದೀಕ್ಷಾ ಕಾರ್ಯಕ್ರಮಕ್ಕೆ ಮತ್ತು ಕಣ್ವಮಠದ ಉದ್ಘಾಟನಾ ಕಾರ್ಯಕ್ರಮವು ನೆರವೇರಲು ಎಲ್ಲ ಮಠಾಧೀಶರ ಒಪ್ಪಿಗೆಯನ್ನು ಪಡೆದರು. ಕಡೆಗೆ ಭಗವತ್ಸಂಕಲ್ಪಕ್ಕನುಸಾರವಾಗಿ ಶಾ.ಶ.1718 ನಳನಾಮ ಸಂವತ್ಸರದ ಮಾಘಶುದ್ಧ ಪಂಚಮಿ ಕಣ್ವ ಮಹರ್ಷಿಗಳ ಜಯಂತಿಯ ಶುಭ ಮುಹೂರ್ತದಲ್ಲಿ (02–02–1797) ಕಣ್ವಮಠದ ಉದ್ಘಾಟನಾ ಸಮಾರಂಭವು ನಡೆಸಬೇಕೆಂದು ನಿರ್ಧಾರವಾಯಿತು.

ಇಷ್ಟರೊಳಗೆ ಶ್ರೀವೆಂಕಟೇಶಾಚಾರ್ಯರಿಂದ ನಡೆಯಬೇಕಾದ ಆತ್ಮಶ್ರಾದ್ಧಾದಿ ವೈದಿಕ ಕಾರ್ಯಕ್ರಮಗಳು ಮುಗಿಸಲ್ಪಟ್ಟವು. ಬಳಿಕ ಶ್ರೀಲಕ್ಷ್ಮೀಮನೋಹರ ತೀರ್ಥರು ಇವರಿಗೆ ವಿದ್ಯುಕ್ತವಾಗಿ ಕ್ರಮಪೂರ್ವಕ ಸನ್ಯಾಸದೀಕ್ಷೆಯನ್ನು ಕೊಟ್ಟು "ಮಾಧವತೀರ್ಥ"ರೆಂಬ ನಾಮಧೇಯವನ್ನಿಟ್ಟರು. ಹಾಗೂ ಕಣ್ವಮಠವು ಇವರಿಂದ ಸ್ಥಾಪನೆಯಾಯಿತೆಂದು ಘೋಷಿಸಿದರು ಮತ್ತು ಈ ಮಠವು ಮುಂದೆ ಉತ್ತರೋತ್ತರ ಅಭಿವೃದ್ಧಿ ಹೊಂದಲೆಂದು ಆಶೀರ್ವದಿಸಿದರು. ಅನಂತರ ಅದೇ ಶುಭ ಮುಹೂರ್ತದಲ್ಲಿ ಇವರಿಗೆ ಪಟ್ಟಾಭಿಷೇಕವಾಗಿ ಕಣ್ವಮಠಕ್ಕೆ ರಾಜ ಚಿಹ್ನೆಗಳೂ ಸಕಲ ಬಿರುದಾವಳಿಗಳೂ ಕೊಡಲ್ಪಟ್ಟವು. ಬಳಿಕ ಶ್ರೀಮದಾನಂದತೀರ್ಥರಿಂದ ಗುರುಪರಂಪರಾಗತ ಉಪದೇಶಿಸಲ್ಪಟ್ಟ ಮೂಲಮಂತ್ರದ ಉಪದೇಶವನ್ನು ಮಾಡಿದರು. ಹಾಗೂ ಉಪಾಸನಾರ್ಥವಾಗಿ ಶ್ರೀಮದಾನಂದ ತೀರ್ಥ ಕರಾರ್ಜಿತ ತಾಂಡವ ವಿಠ್ಠಲಕೃಷ್ಣಮೂರ್ತಿಯನ್ನು, ಅಲಂಕಾರಾರ್ಥವಾಗಿ ರುಕ್ಮಿಣಿ ಸತ್ಯಭಾಮಾ ಸಹಿತವಾಗಿದ್ದ ಶ್ರೀ ವೇಣುಗೋಪಾಲಸ್ವಾಮಿಯ ಪ್ರತಿಮೆಯನ್ನು, ಶ್ರೀಮುದ್ರೆ, ಬಲಮುರಿಶಂಖ ಇವುಗಳನ್ನು ದಯಪಾಲಿಸಿದರು. ಇಷ್ಟೆಲ್ಲ ಮಠದ ಅಧಿಕಾರ ಸೂತ್ರಗಳನ್ನು ದಯಪಾಲಿಸಿದ ಮೇಲೆ ಕೊನೆಗೆ ಶ್ರೀಲಕ್ಷ್ಮೀಮನೋಹರ ತೀರ್ಥರು,

“ಶ್ರೀಮಾಧವತೀರ್ಥಯತಿಗಳಿಗೆ ವಿಷ್ಣುಭಕ್ತಿಯನ್ನು ಪ್ರಸಾರಮಾಡಲಿಕ್ಕೆ, ಅನಂತ ಕಲ್ಯಾಣಗುಣಪರಿಪೂರ್ಣನಾದ ಶ್ರೀಮನ್ನಾರಾಯಣನ ಉಪಾಸನೆಯನ್ನು ಬೆಳಸಲಿಕ್ಕೆ, ಕಾಣ್ವ ಬ್ರಾಹ್ಮಣರಿಗೆ ಮೋಕ್ಷಸಾಧನೆಯು ಮಾರ್ಗವನ್ನು ತೋರಿಸಲಿಕ್ಕೆ ಸಂನ್ಯಾಸದೀಕ್ಷೆಯನ್ನು ಕೊಟ್ಟು, ಇವರಿಂದ ಕಣ್ವಮಠದ ಸ್ಥಾಪನೆಯಾಗಿದೆ ಎಂದು ಪ್ರಕಟಮಾಡಿದ್ದೇವೆ. ಅಲ್ಲದೆ ಘಟ್ಟದ ಮೇಲಿನ ತಮ್ಮ ಶಾಖೆಯ ಬ್ರಾಹ್ಮಣರ ಮೇಲೆ ನಿರಾತಂಕವಾಗಿ ಇವರು ಅಧಿಕಾರವನ್ನು ನಡೆಸಬಹುದು. ಇವರಿಗೆ ಮುದ್ರಾಧಾರಣೆ ಮಾಡುವ ಅಧಿಕಾರವನ್ನು ಕೊಟ್ಟಿದ್ದೇವೆ. ಘಟ್ಟದ ಮೇಲಿನ ಕಾಣ್ವದ್ವೈತ ಸಮಾಜದ ಧರ್ಮಸಾಮ್ರಾಜ್ಯ ಚಕ್ರವರ್ತಿಗಳಿವರು" ಎಂದು ಘೋಷಿಸಿದ ಸ್ವಹಸ್ತಾಕ್ಷರದ ಅಧಿಕಾರ ಪತ್ರವನ್ನು ಕೊಟ್ಟು ಅನುಗ್ರಹಮಾಡಿದರು.

ಆ ಮೇಲೆ ಕಣ್ವಧರ್ಮ ಸಾಮ್ರಾಜ್ಯ ಚಕ್ರವರ್ತಿಗಳಾದ ಶ್ರೀಮನ್ಮಾಧವತೀರ್ಥಯತಿವರ್ಯರಿಗೆ ಎಲ್ಲ ಶಿಷ್ಯವೃಂದವು ಕಾಣಿಕೆಗಳನ್ನು ತಂದೊಪ್ಪಿಸಿತು. ಸಭೆಯನ್ನು ಅಲಂಕರಿಸಿದ್ದ ವಿದ್ವನ್ಮಣಿಗಳು ಇವರ ಮೇಲೆ ಭಕ್ತಿಯುಕ್ತ ಪ್ರಶಂಶನಾಪರ ಪದ್ಯಗಳನ್ನುಮಾಡಿ ತಮ್ಮ ವಾಣಿಯನ್ನು ಸಾರ್ಥಕ ಮಾಡಿಕೊಂಡರು. ಹರಿಕೀರ್ತನಕಾರರು ಸುಸ್ವರದಿಂದ ಭಗವನ್ನಾಮ ಸಂಕೀರ್ತನೆಯನ್ನು ಮಾಡಿದರು ಶ್ರೀಮನ್ ಮಾಧವತೀರ್ಥರ ಸಕಲ ಬಿರುದಾವಳಿಗಳು ಉಡುಪಿಯ ಅಷ್ಟಮಠದ ಯತಿವರ್ಯರ ಸಾನಿಧ್ಯದಲ್ಲಿ ಹೊಗಳಲ್ಪಟ್ಟವು. ಭಕ್ತರಿಂದಲೂ ಶಿಷ್ಯರಿಂದಲೂ ಪುಷ್ಪವೃಷ್ಟಿಯಾಯಿತು. ಅನಂತರ ವಿದ್ವನ್ಮಣಿಗಳಿಗೆ ಸಂಭಾವನೆಗಳೂ, ಬ್ರಾಹ್ಮಣರಿಗೆ ದಕ್ಷಿಣೆದಾನಗಳು ಕೊಡಲ್ಪಟ್ಟವು. ಅನ್ನವಸ್ತ್ರಾದಿಗಳ ದಾನಗಳ ಕಾರ್ಯಗಳೂ ಬಲು ವಿಜೃಂಭಣೆಯಿಂದ ನೆರವೇರಿದವು.

ಈ ಮೇರೆಗೆ ಶ್ರೀಮನ್ಮಾಧವತೀರ್ಥರು ಕಣ್ವಮಠದ ಆದ್ಯ ಪೀಠವನ್ನು ಅಲಂಕರಿಸಿದ ವಿಷಯದಲ್ಲಿ ಉಡುಪಿಯ ಸಮಸ್ತ ಬ್ರಹ್ಮವೃಂದಕ್ಕೂ, ಕಾಣ್ವಸಮಾಜಕ್ಕೂ ಬಹಳ ಆನಂದವಾಯಿತು. ಪ್ರತಿಭಾ ಶಾಲಿಗಳೂ, ಆದಿಶೇಷನ ಅನುಗ್ರಹಕ್ಕೆ ಪಾತ್ರರಾದವರೂ ಆದ ಶ್ರೀಮನ್ಮಾಧವತೀರ್ಥರು ಈ ಪೀಠದಿಂದ ಕಣ್ವಧರ್ಮ ಸಾಮ್ಯಾಜ್ಯವನ್ನಾಳುವ ಮಹಾಗುರುಗಳೆಂದು ಪ್ರಸಿದ್ಧರಾದರು.

ತಾವು ಕೈಕೊಂಡ ಕೆಲಸವು ಯಥಾಸಾಂಗವಾಗಿಯೂ, ನಿರ್ವಿಘ್ನವಾಗಿಯೂ ಕೊನೆಗೊಂಡದಕ್ಕಾಗಿ ಶ್ರೀಲಕ್ಷ್ಮೀಮನೋಹರ ತೀರ್ಥ ಶ್ರೀಪಾದಂಗಳವರಿಗೆ ಅನಂತ ಧನ್ಯವಾದಗಳನ್ನು ಮತ್ತು ವಂದನೆಗಳನ್ನು ಸಲ್ಲಿಸಿದರು. ಮುಂದಿನ ಭಗವತ್ ಸೇವಾಕಾರ್ಯವು ಬಹಳ ಇರುವುದರಿಂದ ಶ್ರೀಪಾದಂಗಳ ಅಪ್ಪಣೆಯನ್ನು ಪಡೆದು ತಮ್ಮ ಸಕಲ ವೈಭವ ಹಾಗೂ ಕಾಣ್ವ ಪರಿವಾರದೊಂದಿಗೆ ಶ್ರೀಮಾಧವ ತೀರ್ಥರು ಸುರಪುರಕ್ಕೆ ಪ್ರಯಾಣಬೆಳೆಸಿದರು.

ಸುರಪುರಕ್ಕೆ ಬರುವ ಮಾರ್ಗದಲ್ಲಿ ಇರುವ ಅನೇಕ ಊರುಗಳಲ್ಲಿಯ ಶ್ರೀಮಾಧವತೀರ್ಥ ಶ್ರೀಪಾದಂಗಳವರನ್ನು ಪರಮೋತ್ಸಾಹದಿಂದ ಬರಮಾಡಿಕೊಂಡು, ಅವರ ಪೂಜೆ ಭಿಕ್ಷಾ ಬಂಧನಾದಿಗಳಿಗೆ ಯೋಗ್ಯ ವ್ಯವಸ್ಥೆಯನ್ನು ಮಾಡಿ, ತಮ್ಮ ಸೇವೆಯನ್ನು ಸಮರ್ಪಿಸಿದರು. ಶ್ರೀಪಾದಂಗಳ ದರ್ಶನದಿಂದಲೂ ಮತ್ತು ಅವರ ಆರಾಧ್ಯ ದೇವನಾದ ಶ್ರೀವಿಠ್ಠಲಕೃಷ್ಣದೇವರ ತೀರ್ಥಪ್ರಸಾದದಿಂದಲೂ

ತೃಪ್ತರಾಗಿ ಶ್ರೀಪಾದಂಗಳವರಲ್ಲಿ ಅತುಲಭಕ್ತಿ ಮತ್ತು ವಿಶ್ವಾಸವನ್ನು ತೋರಿಸಿದರು. ಬಹಳಷ್ಟು ಭಾಗವತ ಸಂಪ್ರದಾಯದ ಕಾಣ್ವರಿಗೆ ಮತ್ತು ಈ ಮೊದಲು ಶ್ರೀಮತ್ ರಾಘವೇಂದ್ರ ಸ್ವಾಮಿಯವರ ಮಠದಿಂದ ಮುದ್ರಾಧಾರಣೆಯಾದ ಕಾಣ್ವರು ಕೂಡ ಮುದ್ರಾಧಾರಣೆ ಮಾಡಿಕೊಂಡರು. ಮುಂದೆ ಪ್ರಯಾಣ ಬೆಳೆಸಿದನಂತರ ಜಾಲಹಳ್ಳಿಯಲ್ಲಿ ದೇಶಪಾಂಡೆಯವರ ನೇತೃತ್ವದಲ್ಲಿ ನಗರಪ್ರವೇಶವಾಯಿತು. ಅವರ ಮನೆಯಲ್ಲಿಯೇ ಶ್ರೀವಿಠ್ಠಲಕೃಷ್ಣನ ಪೂಜೆಯ, ತೀರ್ಥಪ್ರಸಾದದ ವ್ಯವಸ್ಥೆಯಾಗಿತ್ತು. ಮರುದಿನ ಜೋಯಿಸರ ಮನೆಯಲ್ಲಿ ಶ್ರೀಪಾದಂಗಳ ಸಂಜಾತದ ಕಾರ್ಯಕ್ರಮವಿದ್ದುದರಿಂದ ಶ್ರೀಪಾದಂಗಳು ಅಂದೇ ಅವರ ಮನೆಯಲ್ಲಿ ವಾಸ್ತವ್ಯ ಮಾಡಿದ್ದರು.

ಬೆಳಗ್ಗೆ ಎದ್ದು ತಮ್ಮ ದಿನನಿತ್ಯದ ಆಹ್ನಿಕಕಾರ್ಯಗಳನ್ನು ಮುಗಿಸಿ ಜೋಯಿಸರ ದೇವರಮನೆಯಲ್ಲಿ ಆದಿಶೇಷನ ಧ್ಯಾನಮಾಡುತ್ತ ಕುಳಿತಿದ್ದರು. ಓಣಿಯಲ್ಲಿ ಒಮ್ಮಿಂದೊಮ್ಮೆಲೆ ಗಲಾಟೆ ಪ್ರಾರಂಭವಾಯಿತು. ಯಾವುದೋ 20–25 ಜನರಿರುವ ಅಧರ್ಮಿಗಳ ಗುಂಪು ಶ್ರೀಪಾದಂಗಳ ಹತ್ತೆಗೈಯಲು ಮಾರಕಾಸ್ತ್ರಗಳನ್ನು ಹಿಡಿದುಕೊಂಡು ದೇಶಪಾಂಡೆಯವರ ಮನೆಯನ್ನು ಶೋಧಿಸುತ್ತಿರುವರೆಂದೂ,ಅಲ್ಲಿ ಅವರು ಸಿಗದಿರಲು ಪ್ರತಿಯೊಬ್ಬ ಬ್ರಾಹ್ಮಣರ ಮನೆಯನ್ನು ಶೋಧಿಸುತ್ತಿರುವರೆಂಬ ಭಯಾನಕ ಸುದ್ದಿ ಕಾಳ್ಗಿಚ್ಚಿನಂತೆ ಹಬ್ಬತೊಡಗಿತು, ತಮ್ಮ ಮನೆಯಲ್ಲಿ ಧ್ಯಾನಕ್ಕೆ ಕುಳಿತ ಶ್ರೀಪಾದಂಗಳಿವರಿಗೆ ಜೋಯಿಸರು ವಿಷಯವನ್ನು ತಿಳಿಸಿ, ದಿಗ್ಮೂಢರಾಗಿ ನಿಂತರು. ಇದನ್ನು ಕೇಳಿ ಶ್ರೀಪಾದಂಗಳು, "ಜೋಯಿಸರೇ, ನೀವು ಯಾವುದಕ್ಕು ಹೆದರುವ ಅವಶ್ಯಕತೆ ಇಲ್ಲ. ನಮ್ಮ ಆರಾಧ್ಯಮೂರ್ತಿ ಆದಿಶೇಷನ ಮತ್ತು ಉಪಾಸ್ಯ ಮೂರ್ತಿ ವಿಠ್ಠಲಕೃಷ್ಣನ ಆಶೀರ್ವಾದ ನಮ್ಮ ಮೇಲಿದೆ. ಯಾರೂ ಗಲಿಬಿಲಿಗೊಳ್ಳಬೇಡಿ. ಯಾರುಬರುತ್ತಾರೋ ಬರಲಿ ಅವರನ್ನು ತಡೆಯಬೇಡಿ." ಎಂದು ಹೇಳಿ ಕಣ್ಮುಚ್ಚಿ ಧ್ಯಾನ ಮುಂದುವರೆಸಿದರು. ಅಧರ್ಮಿಗಳೂ ಬಂದು ಗಲಾಟೆಮಾಡಿ ಮನೆಯಲ್ಲಿರುವ ಪ್ರತಿಯೊಂದು ಕೋಣೆಯನ್ನು ಹುಡುಕಿದರು. ಶ್ರೀಗಳವರು ಎಲ್ಲೂ ಸಿಗಲಿಲ್ಲ. ಕೊನೆಗೆ ದೇವರ ಮನೆಯನ್ನು ಪ್ರವೇಶಿಸಲು ಉದ್ಯುಕ್ತರಾದರು. ಅವರು ಹೊಸ್ತಿಲಲ್ಲಿ ಕಾಲಿಡಬೇಕೆನುವುದರಲ್ಲಿಯೇ ಐದಡಿ ಉದ್ದದ ಕರಿನಾಗರಹಾವು ಬುಸುಗುಡುತ್ತ ಇವರತ್ತ ಚಿಮ್ಮಿಬಂದಿತು. ನಾಗರಹಾವಿನ ರೌದ್ರರೂಪವನ್ನು ನೋಡಿ ಭಯಗೊಂಡು ಮನೆಯಿಂದ ಹಾಗೇ ಹೊರಟುಹೋದರು. ಬಳಿಕ ಶ್ರೀಪಾದಂಗಳು ಭಕ್ತಿಯಿಂದ ದೀರ್ಘದಂಡ ನಮಸ್ಕಾರ ಹಾಕಿದ ಮೇಲೆ ನಾಗರಹಾವು ದೇವರ ಮನೆಯಿಂದ ಪಡಶಾಲೆಗೆ ಬಂದು, ತಲೆಬಾಗಿಲಿನಿಂದ ಹೊರಗೆಹೋಗಿ ಮರೆಯಾಯಿತು, ಈ ದೃಶ್ಯವನ್ನು ನೋಡಿದ ಪ್ರತಿಯೊಬ್ಬರಿಗೂ ಆನಂದಾಶ್ಚರ್ಯವಾಯಿತು.

ದೇವರ ಮನೆಯಲ್ಲಿ ಇಷ್ಟುದೊಡ್ಡ ನಾಗರಹಾವು ಎಲ್ಲಿಂದ ಬಂತು ಎಂಬುವ ಪ್ರಶ್ನೆಯು ಎಲ್ಲರನ್ನು ಕಾಡತೊಡಗಿತ್ತು. ಬಳಿಕ ಎಲ್ಲ ಕಾರ್ಯಕ್ರಮಗಳು ನಿರ್ವಿಘ್ನವಾಗಿ ಜರುಗಿದವು. ಶ್ರೀ ಪಾದಂಗಳು ಎಲ್ಲರಿಗೂ ಫಲಮಂತ್ರಾಕ್ಷತಿಯನ್ನು ಕೊಟ್ಟು ಸೈನಿಕ ಠಾಣೆಯಾದ ವೀರಘಟ್ಟಕ್ಕೆ ತೆರಳಿದರು. ಶ್ರೀಗಳನ್ನು ಬೀಳ್ಕೊಡಲು ದೇಶಪಾಂಡೆ, ಕುಲಕರ್ಣಿ ಮತ್ತು ಜೋಯಿಸರು ಎಲ್ಲರೂ ವೀರಘಟ್ಟದವರೆಗೆ ಹೋದರು. ಜೋಯಿಸರ ಆದರೋಪಚಾರ ಮತ್ತು ಅಧರ್ಮಿಗಳು ಬಂದಾಗ ಅವರು ತೋರಿದ ತಾಳ್ಮೆಸಾಹಸ ಶ್ರೀಪಾದಂಗಳವರ ಹೃದಯತಟ್ಟಿತ್ತು. ಅದಕ್ಕಾಗಿ ಜೋಯಿಸರನ್ನು

ಜಾಲಹಳ್ಳಿಯಲ್ಲಿಯ ಕಾಣ್ವಶಾಖೆಯ ಧರ್ಮಾಧಿಕಾರಿಯನ್ನಾಗಿ ನೇಮಿಸಿರುವುದಾಗಿ ಸೂಚಿಸಿದರು.

ಬಳಿಕ ಕೃಷ್ಣಾ ನದಿಯನ್ನು ದಾಟಿ ತಿಂಥಿಣಿ, ಶಾಂತಪುರ ಮತ್ತು ದೇವಪುರಗಳಿಗೆ ಬಂದು ಶ್ರೀಪಾದಂಗಳವರು ಶಿಷ್ಯ ಸಮುದಾಯಕ್ಕೆಲ್ಲ ಅನುಗ್ರಹಿಸಿದರು. ದೇವಪುರದಲ್ಲಿಯ ಕಾರ್ಯಕ್ರಮ ಮುಗಿದ ನಂತರ ಸುರಪುರ ಪಟ್ಟಣದಕಡೆಗೆ ಸಾಗಿದರು. ಸುರಪುರ ಪಟ್ಟಣವನ್ನು ಪ್ರವೇಶಮಾಡುವ ಕಾರ್ಯಕ್ರಮ ನಡೆಯುವ ಮುನ್ನ ಪಟ್ಟಣದ ಮೇದಾರ ಓಣಿಯಲ್ಲಿರುವ ಹನುಮಂತದೇವರ ಮಂದಿರದಲ್ಲಿ ದೇವರ ದರ್ಶನಗೊಂಡು ವಿಶ್ರಾಂತಿ ಪಡೆದರು. ಪದ್ಧತಿಯಂತೆ ಮಠದ ಪ್ರತಿನಿಧಿಯು ಬೆಳ್ಳಿ ಬೆತ್ತ ಹಿಡಿದುಕೊಂಡು ದೊರೆಗಳ ಅರಮನೆಗೆ ಹೋಗಿ ಶ್ರೀ ಪಾದಂಗಳು ಬಂದ ಸಮಾಚಾರವನ್ನು ಮುಟ್ಟಿಸಿ, ಶ್ರೀಪಾದಂಗಳ ಶೋಭಾಯಾತ್ರೆಗೆ ವ್ಯವಸ್ಥೆಮಾಡಬೇಕೆಂದು ಬಿನ್ನವಿಸಿಕೊಂಡರು. ಅದರಂತೆ ನಡೆದುಕೊಳ್ಳಲಾಯಿತು. ಇಮ್ಮಡಿ ವೆಂಕಟಪ್ಪ ನಾಯಕ(ದೇವಿಂದ್ರ ವೆಂಕಟಪ್ಪ ನಾಯಕ)ಸಕಲ ರಾಜ ಮರ್ಯಾದೆಯೊಂದಿಗೆ ಶ್ರೀಪಾದಂಗಳವರ ಪುರಪ್ರವೇಶ ಮಾಡಿಸಿದರು.

ಶೋಭಾಯಾತ್ರೆ ಮುಂದೆ ಸಾಗಿದಂತೆಲ್ಲ ಕುದುರೆಯ ಮೇಲೆ ಕುಳಿತ ಮಠದಪ್ರತಿನಿಧಿಗಳು "ಶ್ರೀ ಮತ್ಪರಮಹಂಸ ಪರಿವ್ರಾಜಕಾಚಾರ್ಯ ಪದವಾಕ್ಯ ಪ್ರಮಾಣಪಾರಾವಾರ ಪಾರಂಗತ ಸರ್ವತಂತ್ರ ಸ್ವತಂತ್ರ ಯಮನಿಯಮಾಸನ ಪ್ರಾಣಾಯಾಮ ಪ್ರತ್ಯಾಹಾರ ಧ್ಯಾನಧಾರಣ ಸಮಾಧ್ಯಷ್ಟಾಂಗ ಯೋಗಾನುಷ್ಠಾನನಿಷ್ಠ ಶ್ರೀಮತ್ಸೂರ್ಯಾಂತೇವಾಸಿ ಶ್ರೀಮದ್ಯಾಜ್ಞವಲ್ಕ್ಯ ಗುರುಕುಲಾಬ್ಧಿ ಶೀತಕಿರಣ ಸಕಲ ಸುರಮುನಿಮುಕುಟ ಪ್ರಭಾಪುಂಜರಂಜಿತ ಶ್ರೀಮದ್ಭೈಷ್ಮೀ ಸತ್ಯಭಾಮಾಸಹಿತ ಶ್ರೀವಿಠ್ಠಲಕೃಷ್ಣ ಪಾದಪದ್ಮಾರಾಧಕ ಶ್ರೀ ಮತ್ಸುಖತೀರ್ಥ ಶುಭ ಸಂಪ್ರದಾಯ ಪ್ರವರ್ತಕ ಶ್ರೀಮದಯಾತಯಾಮ ವೇದಾರ್ಥ ಪ್ರತಿಸಾಧಕ ಶ್ರೀಮತ್ಕೃಷ್ಣಾತೀರ ವಿರಾಜಮಾನ ಸಂಸ್ಥಾನ ವೀರಘಟ್ಟ ಸುರಪುರವರಾಧೀಶ ಶ್ರೀಮತ್ಕಣ್ವ ಮಠಪೀಠಾಧಿಷ್ಠಿತ ಶ್ರೀಮನ್ ಮಾಧವತೀರ್ಥ ಶ್ರೀಪಾದಸ್ವಾಮಿಭಿಃ" ಬಹುಪರಾಕು ಬಹುಪರಾಕು......." ಈ ರೀತಿ ಘೋಷಿಸುತ್ತ ಮುಂದೆ ಸಾಗುತ್ತಿದ್ದರು.

ರಾಜದಂಪತಿಗಳ ಉಪಸ್ಥಿತಿಯಲ್ಲಿ ಅವರ ಪರವಾಗಿ ದರಬಾರದ ರಾಜಪುರೋಹಿತರಿಂದ ಶ್ರೀಪಾದಂಗಳ ಪಾದಪೂಜೆ, ರಾಜಮನ್ನಣೆ ನಡೆಯಿತು. ಬಳಿಕ ರಾಜದಂಪತಿಗಳು ಸಾಷ್ಟಾಂಗವೆರಗುತ್ತ ಶ್ರೀಪಾದಂಗಳ ಅಡಿಯಲ್ಲಿ ಒಂದು ರಾಜಮುದ್ರೆಯುಳ್ಳ ಪತ್ರವನ್ನು ಸನ್ನಿಧಿಯಲ್ಲಿ ಸಮರ್ಪಿಸಿದರು. ಅದರಲ್ಲಿ ರಾಮಪುರವೆಂಬ ಗ್ರಾಮವನ್ನು ಶ್ರೀಮಠಕ್ಕೆ ಜಾಹಗೀರ ಹಳ್ಳಿಯೆಂದು ಬರೆದದ್ದು ತಿಳಿದ ಮೇಲೆ ಶ್ರೀಪಾದಂಗಳವರು ಅತ್ಯಂತ ನಿಸ್ಪೃಹವೃತ್ತಿಯುಳ್ಳವರಿದ್ದುದರಿಂದ ದೊರೆಯನ್ನು ಕುರಿತು, "ಎಲೈ ರಾಜನೇ, ನಾವು ಸನ್ಯಾಸಿಗಳು ನಮಗೆ ಈ ದಾನದ ಭಾರವನ್ನು ಹೊರಿಸಬೇಡ. ಅದರ ಬದಲಾಗಿ ಶ್ರೀಮಠಕ್ಕೆ ಬರುವ ಭಕ್ತರಿಗೆ ಅನುಕೂಲತೆಗಳನ್ನು ಒದಗಿಸಿಕೊಡು." ಹಾಗೇ ಮುಂದುವರೆದು "ಕೃಷ್ಣವೇಣಿಯು ಉತ್ತರವಾಹಿನಿಯಾಗಿ ಹರಿಯುವ, ತಿಂಥಿಣಿಯ ಆಚೆ ದಡದಲ್ಲಿರುವ ಪವಿತ್ರವಾದ ವೀರಘಟ್ಟದಲ್ಲಿ ಕಣ್ವಮಠವನ್ನು ನಿರ್ಮಿಸಬೇಕೆಂದಿದ್ದೇವೆ. ಅದಕ್ಕೆ ಬೇಕಾಗುವ ವ್ಯವಸ್ಥೆಯನ್ನು ಮಾಡಬೇಕೆಂದು ಆಜ್ಞಾಪಿಸುತ್ತೇವೆ" ಹೀಗೆ ಶ್ರೀಪಾದಂಗಳು ಹೇಳಿದರು. ಶ್ರೀಪಾದಂಗಳ ಈ ವೈರಾಗ್ಯಯುಕ್ತ ನಿಸ್ಪೃಹ ವೃತ್ತಿಯನ್ನು ಕಂಡಮೇಲಂತೂ ಅರಸನಿಗೆ

ದಂಗುಬಡೆದಂತಾಯಿತು. ಇದರಿಂದ ದೊರೆಯ ಗುರುಭಕ್ತಿಯು ದ್ವಿಗುಣಗೊಂಡಿತು. ಶ್ರೀಪಾದಂಗಳು ಆಜ್ಞಾಪಿಸಿದಂತೆ ನಡೆಯುತ್ತ ತನುಮನಧನಗಳಿಂದ ಕಣ್ವಮಠದ ಸೇವೆಯನ್ನು ಮಾಡತೊಡಗಿದನು.

ರಾಜಕೀಯ ಸಂಪ್ರದಾಯದಂತೆ ಅರಮನೆಯಲ್ಲಿ ಶ್ರೀಪಾದಂಗಳವರ ಪಾದಪೂಜೆ ರಾಜ ಮನ್ನಣೆಯಾದನಂತರ, ಮುಜುಮದಾರರಾದ ಭಾಸ್ಕರರಾಯ ಇವರ ಮನೆಯಲ್ಲಿ ಪಾದಪೂಜೆ ಇನ್ನಿತರ ಕಾರ್ಯಕ್ರಮಗಳು ಜರುಗಿದವು.

ಕೃಷ್ಣವೇಣಿನದಿಯು ಉತ್ತರವಾಹಿನಿಯಾಗಿ ಹರಿಯುವ, ತಿಂಥಿಣಿ ಗ್ರಾಮದ ಆಚೆ ದಡದಲ್ಲಿರುದ ಪವಿತ್ರವಾದ ಕ್ಷೇತ್ರವೇ ವೀರಘಟ್ಟವು. ಈ ಪ್ರದೇಶದಲ್ಲಿ 13ನೇ ಶತಮಾನದ ಸ್ವಯಂಭು ಶಂಕರದೇವ ಎನ್ನುವ ಮಹಾಸಾಧಕರು ಹಾಗೂ 16ನೇ ಶತಮಾನದ ಶ್ರೀಮೋನಪ್ಪಯ್ಯನವರು ಕೂಡ ಇದೇ ಪ್ರದೇಶದಲ್ಲಿ ತಪವನ್ನು ಗೈದಿದ್ದರು. ಇಂತಹ ಪವಿತ್ರ ಕ್ಷೇತ್ರವನ್ನು ಶ್ರೀಮಾಧವತೀರ್ಥ ಶ್ರೀಪಾದಂಗಳು ತಮ್ಮ ಕಾರ್ಯಕ್ಷೇತ್ರವನ್ನಾಗಿ ಆಯ್ಕೆ ಮಾಡಿಕೊಂಡರು. ನದಿಯ ದಂಡೆಯ ಮೇಲಿರುವ 600 ಅಡಿ ಎತ್ತರದ ಬೆಟ್ಟದ ಮೇಲೆ ಹೆಬ್ಬಂಡೆಗೆ ಕೆತ್ತಿದ ವೀರ ಆಂಜನೇಯಸ್ವಾಮಿಯ ಗಂಭೀರ ಸುಂದರ ಮೂರ್ತಿ ಇದೆ. ಶ್ರೀಪಾದಂಗಳು ತಮ್ಮ ನಿತ್ಯ ಆಹ್ನಿಕ, ಪೂಜೆ ಹಸ್ತೋದಕವಾದ ಬಳಿಕ ವೇದಗ್ರಂಥಗಳ  ಅವಲೋಕನ ಮಾಡುತ್ತಿದ್ದರು. ಬೆಳಿಗ್ಗೆ ಮತ್ತು ಸಾಯಂಕಾಲ ಬೆಟ್ಟಹತ್ತಿ ವೀರಾಂಜನೆಯ ದರ್ಶನಪಡೆದುಕೊಂಡು ಅಲ್ಲಿಯೇ ಧ್ಯಾನಸ್ಥರಾಗುತ್ತಿದ್ದರು.  ಅವರು ಸವಿಕಲ್ಪ ಸಮಾಧಿಯಲ್ಲಿರುತ್ತಿದ್ದರೋ, ನಿರ್ವಿಕಲ್ಪ ಸಮಾಧಿಯಲ್ಲಿರುತ್ತಿದ್ದರೋ ತಿಳಿಯದು, ನಾಗರಹಾವುಗಳು ಅವರ ಮೈಮೇಲೆ ಹರಿದಾಡಿದರೂ ಶ್ರೀ ಪಾದಂಗಳಿಗೆ ಎಚ್ಚರವಿರುತ್ತಿರಲಿಲ್ಲ. ವಿಷಸರ್ಪಗಳು ಏನೂ ತೊಂದರೆಕೊಡದೆ ಇರುವುದು ನೋಡಿ ಜನರು ಇವರನ್ನು ಆದಿಶೇಷನ ಅಂಶ ಸಂಭೂತರೋ ಏನೋ ಎಂದು ಅಂದುಕೊಳ್ಳುತ್ತಿದ್ದರು. ಕೆಲವೊಮ್ಮೆ ಎಳ್ಳುಬೆಲ್ಲದ ಚಿಗಳಿಯನ್ನು ಶ್ರೀ ವಿಠ್ಠಲಕೃಷ್ಣನಿಗೆ ಅರ್ಪಿಸಿ, ಅದನ್ನೇ ಸೇವಿಸಿ ತಪಸ್ಸು ಮಾಡುತ್ತಿದ್ದರು.

ಶ್ರೀಪಾದಂಗಳು ದ್ವೈತಮತದ ಪ್ರಸಾರಕ್ಕೋಸ್ಕರ ಆದವಾನಿ, ಅನಂತಪುರದ ಮಾರ್ಗವಾಗಿ ಬೆಂಗಳೂರು, ಕೋಲಾರ, ಮುಳಬಾಗಿಲು, ಚಿಂತಾಮಣಿ, ಅರಸಿಕೆರೆ, ಚಿಕ್ಕಬಳ್ಳಾಪುರ ಮುಂತಾದ ಕಡೆಗೆ ಪ್ರಯಾಣ ಬೆಳೆಸಿದರು. ಎಲ್ಲ ಕಡೆ ತಮ್ಮ ವಿದ್ವತ್ಪೂರ್ಣ ಪಾಂಡಿತ್ಯದಿಂದ, ಪ್ರಸಾದಿಕ ವಾಣಿಯಿಂದ ಪಾಠ ಪ್ರವಚನ ಮಾಡುತ್ತ, ಹರಿ ಸರ್ವೋತ್ತಮತ್ವವನ್ನು ಪ್ರತಿಪಾದಿಸುತ್ತ ದ್ವೈತಸಿದ್ಧಾಂತದ ತತ್ತ್ವ ರಹಸ್ಯಗಳನ್ನು ಬೋಧಿಸಿ, ಎಲ್ಲ ಜನರನ್ನು ಉದ್ಧಾರಮಾಡಿದರು. ಮರಳಿಬರುವಾಗ ತಮ್ಮ ಪೂರ್ವಾಶ್ರಮದ ವಿದ್ಯಾಗುರುಗಳಾಗಿದ್ದ  ಶ್ರೀ ಧರ್ಮಭಟ್ಟ ಜೋಯಿಸರು ನೆಲೆಸಿದ್ದ ಆದವಾನಿಗೆ ಆಗಮಿಸಿದರು. ಅಲ್ಲಿ ಧರ್ಮಭಟ್ಟರು ಶ್ರೀಪಾದಂಗಳ ದರುಶನ ಪಡೆದು, ವಿಜಯಯಾತ್ರೆಯ ಸುವಿಚಾರಗಳನ್ನು ತಿಳಿದುಕೊಂಡು ಬಹಳ ಸಂತಸಪಟ್ಟರು. ಅಲ್ಲದೆ ಮೋಕ್ಷಾರ್ಥಿಯಾಗಿ ಸಂನ್ಯಾಸಾಶ್ರಮವನ್ನು ಸ್ವೀಕರಿಸುವ ತಮ್ಮ ಬಲವಾದ ಇಚ್ಛೆಯನ್ನು ವ್ಯಕ್ತಪಡಿಸಿದರು. ಆಗ  ಶ್ರೀ ಮಾಧವತೀರ್ಥರು ಇವರಿಗೆ ಶ್ರೀ ವಾಮನತೀರ್ಥರೆಂಬ ನಾಮಾಭಿದಾನದಿಂದ ಸಂನ್ಯಾಸ ದೀಕ್ಷೆಯನ್ನಿತ್ತು ಅನುಗ್ರಹಿಸಿ, ತಮ್ಮ ತಪಃ ಶಕ್ತಿಯನ್ನು ಶ್ರೀವಾಮನ ತೀರ್ಥರಿಗೆ ಧಾರೆ ಎರೆದರು.

ಕೆಲವುದಿನಗಳ ನಂತರ ಧರ್ಮಪ್ರಚಾರಕ್ಕಾಗಿ, ಶುಕ್ಲಯಜುರ್ವೇದದ ರಕ್ಷಣೆಗಾಗಿ ಶ್ರೀಪಾದಂಗಳವರು ವೀರಘಟ್ಟದಿಂದ ಬೆಳಗಾವಿ, ಧಾರವಾಡ ಜಿಲ್ಲೆಯಲ್ಲಿ ಸಂಚಾರವನ್ನು ಕೈಕೊಂಡರು. ಭಾಗವತ ಸಂಪ್ರದಾಯದ ಕಾಣ್ವವಿಪ್ರರು ಶ್ರೀಪಾದಂಗಳವರಿಂದ ಮುದ್ರಾಧಾರಣೆ ಮಾಡಿಕೊಂಡರು.

ಕಣ್ವಮಠದ ಪೀಠಾಧಿಪತಿಯಾದ ಶ್ರೀಮಾಧವತೀರ್ಥರ ದರ್ಶನಪಡೆಯಲು ಕಾಣ್ವಶಾಖೆಯ ಶೈವಸಂಪ್ರದಾಯದವರೂ ಬರುತ್ತಿದ್ದರು. ಸ್ಮಾರ್ತ, ವೈಷ್ಣವ, ಮಾಧ್ವರೆಂಬ ತಾರತಮ್ಯತೋರದೇ ಶುಕ್ಲಯಜುರ್ವೇದದ ವಿದ್ವಾಂಸರಿಗೆ ಮಾನಸನ್ಮಾನ ಮಾಡುತ್ತಿದ್ದರು. ಶ್ರೀ ಯೋಗೀಶ್ವರ ಯಾಜ್ಞವಲ್ಕ್ಯರ ಕಾಲದಲ್ಲಿ ಕಾಣ್ವ ಮಾಧ್ಯಾಂದಿನ, ಗಾಲವ ಶಾಖೆಯಲ್ಲಿ ಊರ್ಧ್ವಪುಂಡ್ರಧಾರಣೆ ಮತ್ತು ಚಕ್ರ ಮುದ್ರೆ ಧಾರಣೆ ಇದ್ದದ್ದು ಶತಪಥ ಬ್ರಾಹ್ಮಣ ಗ್ರಂಥದಲ್ಲಿ ಇದೆಯೆಂದು ಹೇಳುತ್ತ, ಯಾಜ್ಞವಲ್ಕ್ಯರಂತೆ ಅವರ ಅನುಯಾಯಿಗಳೆಲ್ಲರೂ ಶ್ರೀ ಮನ್ನಾರಾಯಣನ ಆರಾಧಕರು ಮತ್ತು ದ್ವೈತಮತ ಅವಲಂಬಿಗಳು ಎಂದು ವಿವರಿಸಿ ಹೇಳುತ್ತ ತಮ್ಮ ವಿಜಯಧ್ವಜಯಾತ್ರೆಯನ್ನು ಮುಂದುವರೆಸಿದರು.

ಗದಗ, ರೋಣ ಜಕ್ಕಲಿ ಮಾರ್ಗವಾಗಿ ವಿಜಯಪುರಕ್ಕೆ ಶ್ರೀಪಾದಂಗಳವರು ಆಗಮಿಸಿದರು. ಅಲ್ಲಿ ಅವರಿಗೆ ಅಭೂತಪೂರ್ವ ಸ್ವಾಗತವು ದೊರೆಯಿತು. ವಿಜಯಪುರದ ಸುತ್ತಲಿರುವ ಹಳ್ಳಿಗಳಲ್ಲಿ ವಾಸವಾಗಿದ್ದ ಕಾಣ್ವ ಶಾಖೀಯರು ಸಂಪ್ರದಾಯ ಭೇದವಿಲ್ಲದೇ ಶ್ರೀಪಾದಂಗಳ ದರ್ಶನಪಡೆದು, ತೀರ್ಥ ಪ್ರಸಾದವನ್ನು ಸ್ವೀಕರಿಸಿದರು.

ಆನೆಹೊಸುರು ಗ್ರಾಮದಲ್ಲಿ ಶೇಷಗಿರಿರಾಯ ಎಂಬುವ ಸಾತ್ವಿಕ ವಿಪ್ರರಿದ್ದರು. ಇವರ ಧರ್ಮಪತ್ನಿ ಜೀವಮ್ಮನವರು ಕೂಡ ಶೇಷಗಿರಿರಾಯರ ಎಲ್ಲ ಧಾರ್ಮಿಕ ಕಾರ್ಯಗಳಿಗೆ ಪೂರ್ಣ ಸಹಕಾರ ನೀಡುತ್ತಿದ್ದರು, ಕಣ್ವಮಠದ ಶ್ರೀಪಾದಂಗಳು ನಾಲತವಾಡಕ್ಕೆ ಬಂದ ಸುದ್ದಿ ಕೇಳಿ ಶ್ರೀಪಾದಂಗಳವರಿಗೆ ಆನೆಹೊಸುರು ಗ್ರಾಮಕ್ಕೆ ಆಗಮಿಸಿ ತಮ್ಮ ಆತಿಥ್ಯವನ್ನು ಸ್ವೀಕರಿಸಬೇಕೆಂಬ ತಮ್ಮ ಮನದಿಚ್ಛೆಯನ್ನು ವ್ಯಕ್ತಪಡಿಸಿದರು. ಅದಕ್ಕೆ ಶ್ರೀಪಾದಂಗಳು ಒಪ್ಪಿಗೆಯನ್ನು ಸೂಚಿಸಿದರು.

ನಾಲತವಾಡದಿಂದ ಸುಲ್ತಾನಪುರಕ್ಕೆ ಬಂದು, ಅಲ್ಲಿಯೇ ಕೃಷ್ಣಾನದಿಯನ್ನು ದಾಟಿ ಚಿತ್ತಾಪುರಕ್ಕೆ ಹೋಗಿ ಮುಂದೆ 5 ಮೈಲಿದೂರ ಇರುವ ಆನೆಹೊಸುರು ಗ್ರಾಮಕ್ಕೆ ಹೋಗಬೇಕು. ನಾವನ್ನು ಹತ್ತಿ ನದಿಯನ್ನು ದಾಟಬೇಕು ಎನ್ನುತ್ತಿರುವಾಗ ಅನಿರೀಕ್ಷಿತವಾಗಿ ನದಿಯಲ್ಲಿ ಪ್ರವಾಹ ಬಂದಿತು. ನಾವಿಕರು ನಾವನ್ನು, ಹರಿಗೋಲನ್ನು ನೀರಿಗಿಳಿಸಲು ಹಿಂದೆಸರಿದರು. ತಾವು ಈಗ ನದಿಯನ್ನು ದಾಟಿ ಆ ದಂಡೆಗೆ ಹೋಗದಿದ್ದರೆ, ಸಂಭ್ರಮದಲ್ಲಿ ತಮ್ಮನ್ನು ಸ್ವಾಗತಿಸಲು ಬಂದ ಜನರಿಗೆ ನಿರಾಶೆಯಾಗುವುದೆಂದು ಚಿಂತಿಸತೊಡಗಿದರು. ತಮ್ಮ ಸಿಬ್ಬಂದಿಗಳಿಗೆ ನದಿಯ ಪ್ರವಾಹ ಕಡಿಮೆಯಾದ ಬಳಿಕ ಬರುವಂತೆ ಆಜ್ಞಾಪಿಸಿ ತಾವು ಶ್ರೀವಿಠ್ಠಲಕೃಷ್ಣನ ಸಂಪುಷ್ಟ ತೆಗೆದುಕೊಂಡು, ಪ್ರವಾಹದ ಮೇಲೆ ಶಾಟಿಯನ್ನು ಹರಡಿ ಅದರ ಮೇಲೆ ಕುಳಿತು ಯೋಗಮಾರ್ಗದಿಂದ ನದಿಯ ಮೇಲೆ ಸಾಗಿ ಆ ದಡವನ್ನು ಸೇರಿದರು. ತಮ್ಮೆದುರಿಗೆ ನಡೆಯುತ್ತಿರುವ ಈ ಪವಾಡವನ್ನು ಗಾಬರಿಯಿಂದ, ಭಯದಿಂದ,

ಆಶ್ಚರ್ಯದಿಂದ ಗಮನಿಸುತ್ತಿದ್ದು ತಮ್ಮ ಕಣ್ಣನ್ನು ತಾವೇ ಜನರು ನಂಬದಾದರು. (ಈ ವಿಷಯ ಜನಜನಿತವಾಗಿದೆ. ಇದನ್ನು ಹೇಳಿದವರು ಡಾ.ಭೀಮಸೇನರಾದ ಕುಲಕರ್ಣಿ, ಆನೆಹೊಸೂರು.)

ಶೇಷಗಿರಿರಾಯರು ತಮ್ಮ ಸಿಬ್ಬಂದಿ ಮತ್ತು 400ಜನ ಭಟರೊಂದಿಗೆ ಮೆರವಣಿಗೆಯಲ್ಲಿ ಶ್ರೀಪಾದಂಗಳವರನ್ನು ಆನೆಹೊಸೂರಿಗೆ ಕರೆದೊಯ್ದರು. ಕೋಟೆಯೊಳಗಿದ್ದ ಬೃಹತ್ ಕಟ್ಟಡವೇ ಶೇಷಗಿರಿರಾಯರ ಮನೆ. ಇದು ಸಂಸ್ಥಾನದ ಅರಮನೆಯೇನೋ ಅನ್ನುವಷ್ಟು ದೊಡ್ಡದಾಗಿದ್ದು ಬಾವಿ, ದೊಡ್ಡ ತುಳಸಿ ವೃಂದಾವನ ವಿವಿಧ ಹಣ್ಣುಗಳ ಗಿಡಮರಗಳ ತೋಪು ಇದ್ದಂತಿತ್ತು ಅವರ ಹಿತ್ತಲು. ತ್ರಿಕಾಲ ಜ್ಞಾನಿಗಳಾದ ಶ್ರೀಪಾದಂಗಳವರಿಗೆ ತಮ್ಮ ಜೀವಕ್ಕೆ ಅಪಾಯವಿದೆ ಎಂಬ ಸುಳಿವುದೊರೆಯಿತು. ಇದರಿಂದ ಪಾರಾಗಲು ತಪಸ್ಸು ಮಾಡುವುದೇ ಒಂದು ಶ್ರೇಷ್ಠ ಪರಿಹಾರವೆಂದರಿತು, ಶ್ರೀಪಾದಂಗಳು ಶೇಷಗಿರಿರಾಯರಿಗೆ ಮತ್ತು ಅವರ ಧರ್ಮಪತ್ನಿ ಜೀವಮ್ಮನವರಿಗೆ ತಾವು ನೆಲಮಾಳಿಗೆಯಲ್ಲಿ ತಪಸ್ಸು ಮಾಡುವದಾಗಿಯೂ, ಯಾವುದೇ ರೀತಿಯ ಅನಾನುಕೂಲವಾಗದಂತೆ ನೋಡಿಕೊಳ್ಳಬೇಕೆಂದು ಆಜ್ಞಾಪಿಸಿದರು. ಆರು ತಿಂಗಳು ತಪವಾಚರಿಸಿದಮೇಲೆ ಎಲ್ಲರಿಗೂ ಆಶೀರ್ವಾದವನ್ನು ಅನುಗ್ರಹಿಸಿ ಬುದ್ದಿನ್ನಿ ಗ್ರಾಮಕ್ಕೆ ತೆರಳಿದರು.

ಬುದ್ಧಿನ್ನಿ ದೇಸಾಯಿಯವರು ಕಾಣ್ವಶಾಖೀಯರಾಗಿದ್ದು ಶ್ರೀಪಾದಂಗಳವರ ಮೇಲೆ ವಿಶೇಷ ಪ್ರೀತಿ ಆದರವನಿಟ್ಟು ಕೊಂಡಿದ್ದರು. ದೇಸಾಯಿಯವರ ಅಪೇಕ್ಷೆಯಂತೆ ಕೆಲವುದಿನ ಅಲ್ಲಿಯೇ ತಂಗಿ, ಅವರ ವಠಾರದಲ್ಲಿರುವ ಹುಡೆಯೊಳಗಿನ ಕೋಠಡಿಯಲ್ಲಿ ತಪಸ್ಸುಮಾಡಿದರು. ಅವರ ಆದರಾತಿಥ್ಯಕ್ಕೆ ಮನಸೋತು ಹೃತ್ಪೂರ್ವಕ ಆಶೀರ್ವದಿಸಿ ಗುಡಗುಂಟಿ ಸಂಸ್ಥಾನಕ್ಕೆ ತೆರಳಿದರು.

ಗುಡಗುಂಟಿಯಲ್ಲಿ ಕಾಣ್ವಶಾಖೆಯ ಜನರಿಂದ ಮತ್ತು ಸಂಸ್ಥಾನದವತಿಯಿಂದ ಭವ್ಯವಾದ ಸ್ವಾಗತದೊರೆಯಿತು. ಇಲ್ಲಿ ಆದರಾತಿಥ್ಯವನ್ನು ಸ್ವೀಕರಿಸಿ ವೀರಘಟ್ಟದಕಡೆಗೆ ಪ್ರಯಾಣ ಬೆಳೆಸಿದರು.

ವೀರಘಟ್ಟಕ್ಕೆ ಬಂದಮೇಲೆ ಶ್ರೀಪಾದಂಗಳು ಒಂದು ವರ್ಷ ವಿಜಯಯಾತ್ರೆಗೈಯದಿರಲು ನಿರ್ಧರಿಸಿ, ಈ ಅವಧಿಯಲ್ಲಿ ಅಧ್ಯಯನ, ಅಧ್ಯಾಪನ, ತಪಸ್ಸು ಮತ್ತು ಭಕ್ತರ ಸಮಸ್ಯೆಗಳಿಗೆ ಉಪಾಯ ಸೂಚಿಸುವುದು, ಇದನ್ನೇ ತಮ್ಮ ಕಾರ್ಯಕ್ರಮವನ್ನಾಗಿಸಿಕೊಂಡರು. ತಮ್ಮ ಪ್ರವಚನಗಳಲ್ಲಿ...

"ಶ್ರೀಸೂರ್ಯನಾರಾಯಣನಿಂದ ಶುಕ್ಲಯಜುರ್ವೇದವನ್ನು ಪಡೆದು ಯೋಗೀಶ್ವರ ಯಾಜ್ಞವಲ್ಕ್ಯರು ಪ್ರಚಾರಮಾಡಿದ್ದು ವೈಷ್ಣವ ಧರ್ಮವನ್ನೇ. ಶ್ರೀಮನ್ನಾರಾಯಣನ ಉಪಾಸನೆಯನ್ನು ಮಾಡುವುದು ಅವನ ಭಕ್ತರ ಮುಖ್ಯ ಕರ್ತವ್ಯವಾಗಿರುವುದು. ಅವನು ವಿಷ್ಣುವಿನ ಚಿನ್ಹೆಗಳನ್ನು ಅಂದರೆ ಕೇಶವ, ನಾರಾಯಣ, ಮಾಧವ ಮೊದಲಾದ ಭಗವಂತನ ದ್ವಾದಶನಾಮಗಳನ್ನು ತೋರ್ಪಡಿಸುವ ಗೋಪಿಚಂದನದ ನಾಮಗಳನ್ನು ಲಲಾಟ, ಕಂಠ ಹೃದಯ, ಉದರ, ಭುಜ ಮೊದಲಾದ ಶರೀರದ ಭಾಗಗಳ ಮೇಲೆ ಧರಿಸಿಕೊಂಡು, ಬಳಿಕ

ಅವುಗಳ ಮೇಲೆ ಶ್ರೀ ನಾರಾಯಣ ಕರಶೋಭಿತ ಶಂಖ, ಚಕ್ರ, ಗದಾ, ಪದ್ಮ ಮತ್ತು ನಾರಾಯಣ ಮುದ್ರೆಗಳನ್ನು ಧರಿಸಬೇಕು. ಇದು ಭಕ್ತಿಯ ದ್ಯೋತಕವಾಗಿರುವುದು. ಇಂತಹ ವಿಷ್ಣು ಭಕ್ತಿ ಸಮನ್ವಿತನಾದ ವೈಷ್ಣವನು ಕಾಮಕ್ರೋಧಾದಿ ವೈರಿಗಳನ್ನು ಗೆದ್ದು ಶ್ರೀಮನ್ನಾರಾಯಣನ ಪ್ರಿತ್ಯರ್ಥವಾಗಿ ಗಾಯತ್ರಿ ಮಂತ್ರವನ್ನು ಜಪಿಸುತ್ತಿರಬೇಕು, ನಮ್ಮ ಶಾಖೆಗೆ ಸಂಬಂಧಪಟ್ಟ ಶುಕ್ಲಯಜುರ್ವೇದ ಸಂಹಿತೆ, ಶತಪಥ ಬ್ರಾಹ್ಮಣ, ಕಾತ್ಯಾಯನ ಶ್ರೌತಸೂತ್ರ, ಪಾರಸ್ಕರ ಗೃಹ್ಯಸೂತ್ರ, ಯಾಜ್ಞವಲ್ಕ್ಯಸ್ಮೃತಿ, ಯೋಗ ಯಾಜ್ಞವಲ್ಕ್ಯ ಮುಂತಾದ ಧರ್ಮಗ್ರಂಥಗಳ ಅಧ್ಯಯನ ಮಾಡಬೇಕು. ವೇದರಕ್ಷಣೆಯು ನಮ್ಮೆಲ್ಲರ ಕರ್ತವ್ಯ. ಈ ವಿಷಯವನ್ನೇ ವಿಸ್ತೃತವಾಗಿ ಶ್ರೀಮದಾನಂದ ತೀರ್ಥ ಭಗವತ್ಪಾದರು ಹೇಳಿದ್ದಾರೆ" ಎಂದು ಆಜ್ಞಾಪಿಸುತ್ತಿದ್ದರು.

ಈ ರೀತಿ ಮಾಧವತೀರ್ಥ ಶ್ರೀಪಾದಂಗಳು ಕಾಣ್ವ ಶಾಖೆಯ ದ್ವೈತಧರ್ಮ ಸಾಮ್ರಾಜ್ಯದ ಚಕ್ರವರ್ತಿಗಳಾಗಿ ಆಶ್ರಮ ಧರ್ಮವನ್ನು ಪರಿಪಾಲಿಸುತ್ತಾ ಶಿಷ್ಯ ಸಮುದಾಯವನ್ನು ಉದ್ಧರಿಸುತ್ತಿದ್ದರು. ಸುರಪುರದ ದೊರೆಗಳು ಶ್ರೀ ಪಾದಂಗಳ ವೃದ್ಧಿಸುತ್ತಿರುವ ತಪಶ್ಶಕ್ತಿಯನ್ನು, ಮಹಿಮೆಯನ್ನು ಮತ್ತು ಪವಾಡಗಳನ್ನು ಕಂಡು, ತಾವು ಧನ್ಯರಾದೆವು, ತಮ್ಮ ಸಂಸ್ಥಾನ ಧನ್ಯವಾಯಿತೆಂದು ಅಭಿಮಾನಪಟ್ಟರು.

ಜೋತಿಷ್ಯಶಾಸ್ತ್ರ ಪ್ರವೀಣರಾದ ಸುರಪುರದ ವೇದಮೂರ್ತಿ ಶ್ರೀನಿವಾಸಾಚಾರ್ಯ ಕನಕಗಿರಿ ಇವರು ಮತ್ತು ಹಿರೇ ಕೊಟ್ನೆಕಲ್ ಗ್ರಾಮದ ಮೂರು ಹಳ್ಳಿಯ ಕುಲಕರ್ಣಿಯವರ ಕಿರಿಯ ಮಗನು ಮೇಲಿಂದ ಮೇಲೆ ವೀರಘಟ್ಟಕ್ಕೆ ಬಂದು ಶ್ರೀಗಳವರ ದರ್ಶನಗೊಳ್ಳುತ್ತಿದ್ದರು. ಶ್ರೀಗಳವರ ಸಾನಿಧ್ಯದಲ್ಲಿ ತಮ್ಮ ಶಂಕೆಯನ್ನು ಪರಿಹರಿಸಿಕೊಳ್ಳುತ್ತಿದ್ದರು. ಶ್ರೀನಿವಾಸಾಚಾರ್ಯ ಕನಕಗಿರಿಯವರು ಜ್ಯೋತಿಷ್ಯ ಶಾಸ್ತ್ರಕ್ಕೆ ವೇದ ವೇದಾಂಗಗಳಿಗೆ ತಮ್ಮನ್ನು ತಾವು ಅರ್ಪಿಸಿಕೊಂಡರೆ, ಹಿರೇ ಕೊಟ್ನೆಕಲ್ ಕುಲಕರ್ಣಿ ಇವರ ಪುತ್ರ ದಾಸಸಾಹಿತ್ಯಕ್ಕೆ ತಮ್ಮನ್ನು ತಾವು ಅರ್ಪಿಸಿಕೊಂಡರು. ಇಬ್ಬರಿಗೂ ಶ್ರೀಗಳ ಮೇಲೆ ಎಲ್ಲಿಲ್ಲದ ಆದರ ಮತ್ತು ಪ್ರೀತಿ. ಇಲ್ಲಿಗೆ ಬಂದ ಮೇಲೆ ಶ್ರೀಗಳವರ ಪ್ರವಚನವನ್ನು ಕೇಳುತ್ತ ಕೇಳುತ್ತ ಮೈಮರೆಯುತ್ತ ಭಾವಸಮಾಧಿಗೆ ಜಾರುವ ವ್ಯಕ್ತಿತ್ವ ಇವರಿಬ್ಬರದು. ಶ್ರೀಗಳು ವಿಜಯಯಾತ್ರೆಗೆ ಹೊರಟರೆ ಮರಳಿ ಬರುವವರೆಗೂ ಮಠದ ಅಡಳಿತವನ್ನು ಕನಕಗಿರಿ ಶ್ರೀನಿವಾಸಾಚಾರ್ಯರೇ ನೋಡಿಕೊಳ್ಳುತ್ತಿದ್ದರು.

ಕಾಶ್ಯಪ ಗೋತ್ರೋತ್ಪನ್ನರಾದ ಸುರಪುರ ಪಟ್ಟಣದ ವೇದವೇದಾಂಗ ಪಾರಂಗತರಾದ, ಜೋತಿಷ್ಯ ಶಾಸ್ತ್ರ ಪರಿಣಿತ ವೇ॥ ಕನಕಗಿರಿ ಶ್ರೀನಿವಾಸಾಚಾರ್ಯ ಇವರ ಮನದಲ್ಲಿ ವೈರಾಗ್ಯವು ಮೊಳೆಯಲು ಪ್ರಾರಂಭವಾಯಿತು ಹೆಚ್ಚಿನ ಸಮಯವನ್ನು ವೀರಘಟ್ಟದ ಕಣ್ವಮಠದಲ್ಲಿಯೇ ಕಳೆಯುತ್ತಿದ್ದರು. ಒಂದು ದಿನ ಶ್ರೀಪಾದಂಗಳ ಮುಂದೆ ತಮ್ಮ ಮನದೊಳಗಿನ ಆಶಯವನ್ನು ವ್ಯಕ್ತಪಡಿಸಿ, ಮೋಕ್ಷಮಾರ್ಗದ ಚತುರ್ಥ ಆಶ್ರಮವನ್ನು ಅನುಗ್ರಹಿಸಬೇಕೆಂದು ಪ್ರಾರ್ಥಿಸಿಕೊಂಡರು. ಒಂದು ಶುಭಮುಹೂರ್ತದಲ್ಲಿ ಕೃಷ್ಣೆಯ ತಟದಲ್ಲಿಯೇ ವಿದ್ಯುಕ್ತವಾಗಿ ಸನ್ಯಾಸ ದೀಕ್ಷೆಯನ್ನು ಕೊಟ್ಟರು. ವಿಷ್ಣುಪ್ರಿಯತೀರ್ಥರೆಂಬ ನಾಮ ಅಭಿದಾನ ಮಾಡಿದರು. ಮೋಕ್ಷಾರ್ಥಿಯಾಗಿ ಸನ್ಯಾಸ ದೀಕ್ಷೆ ಸ್ವೀಕರಿಸಿದರೂ ತಮ್ಮ ಅನುಪಸ್ಥಿತಿಯಲ್ಲಿ ಕಣ್ವಮಠದ ಆಡಳಿತವನ್ನು ನಿರ್ವಹಿಸಬೇಕೆಂದು ಶ್ರೀಪಾದಂಗಳು

ಆಜ್ಞೆಯನ್ನು ಮಾಡಿದರು. ಹೀಗಾಗಿ ಶ್ರೀ ಮಾಧವತೀರ್ಥ ಶ್ರೀಪಾದಂಗಳಿಂದ ಮೊದಲು ಯತಿದೀಕ್ಷೆ ಪಡೆದವರು ಆದವಾನಿಯ ವಾಮನತೀರ್ಥರಾದರೆ ಎರಡನೆಯವರು ಶ್ರೀ ವಿಷ್ಣುಪ್ರಿಯತೀರ್ಥರು.

ಶ್ರೀ ಮಠದಲ್ಲಿ ಪ್ರತಿವರ್ಷವೂ ಮಠ ಸಂಸ್ಥಾಪನಾ ದಿನವನ್ನು ಮಾಘ ಶುದ್ಧ ಪಂಚಮಿ ಕಣ್ವ ಮಹರ್ಷಿಗಳ ಜಯಂತಿಯ ದಿನದಂದು ಬಹಳ ವಿಜೃಂಭಣೆಯಿಂದ ಆಚರಿಸಲಾಗುತ್ತಿತ್ತು.ಈ ಕಾರ್ಯಕ್ರಮಕ್ಕೆ ಎಲ್ಲ ಊರುಗಳಿಂದ ಭಕ್ತಾದಿಗಳು ಬರುತ್ತಿದ್ದರು. ಸುರಪುರ ಮುಜುಮದಾರ ಭಾಸ್ಕರರಾಯನ ಸಹಾಯದಿಂದ ಹಾಗೂ ಸುರಪುರದ ದೊರೆ ರಾಜಾ ಇಮ್ಮಡಿ ವೆಂಕಟಪ್ಪ ನಾಯಕ (1773–1802)ನ ನಂತರ ಬಂದ ರಾಜಾ ನಾಲ್ವಡಿ ಪಿಡ್ಡನಾಯಕ (1802–1818), ಮುಜುಮದಾರ ಗೋವಿಂದರಾಯ ಭಾಸ್ಕರರಾಯ ಇವರ ರಾಜಾಶ್ರಯದಲ್ಲಿ ಕಾರ್ಯಕ್ರಮವು ಸಂಪನ್ನವಾಗುತ್ತಿತ್ತು.

ಈ ಕಾರ್ಯಕ್ರಮಗಳಿಗೆ ಕೊಟ್ನೆಕಲ್ ಕುಲಕರ್ಣಿಯವರ ಮಗನು ಬರುತ್ತಿದ್ದನು. ಅವನೂ ಈ ಕಾರ್ಯಕ್ರಮದಲ್ಲಿ ಸಕ್ರೀಯವಾಗಿ ಪಾಲ್ಗೊಳ್ಳುತ್ತಿದ್ದನು. ವಿದ್ವಾಂಸರು ನೀಡುವ ಪ್ರವಚನವನ್ನು ಶ್ರದ್ಧೆಯಿಂದ ಆಲಿಸುತ್ತಿದ್ದನು. ಚೀಕಲಪರ್ವಿಯ ವಿಜಯದಾಸರ ಪ್ರಭಾವದಲ್ಲಿ ಬೆಳೆದ ಇವನು ಶಾಸ್ತ್ರೀಯವಾಗಿ ದಾಸರ ಹಾಡುಗಳನ್ನು ಪ್ರಸ್ತುತಪಡಿಸುತ್ತಿದ್ದನು. ಕಾರ್ಯಕ್ರಮಕ್ಕೆ ಬಂದವರೆಲ್ಲರೂ ಹೊರಟಹೋದರೂ, ತಾನು ಮಠದಲ್ಲಿಯೇ ಉಳಿದುಕೊಳ್ಳುತ್ತಿದ್ದನು. ಶ್ರೀಪಾದಂಗಳ ಸನಿಹದಲ್ಲಿದ್ದುಕೊಂಡು ತನ್ನ ಜೀವನ ಸಾರ್ಥಕ ಮಾಡಿಕೊಳ್ಳಬೇಕೆಂಬ ಆಸೆ ಅವನಿಗೆ ಪ್ರಬಲವಾಯಿತು. ಒಂದು ಏಕಾದಶಿ ದಿನದಂದು ಶ್ರೀಪಾದಂಗಳು ಆಹ್ನಿಕಗಳನ್ನು ಮುಗಿಸಿ ಬೆಟ್ಟದ ಮೇಲಿರುವ ಆಂಜನೇಯುನ ಸನ್ನಿಧಿಯಲ್ಲಿ ಧ್ಯಾನಸ್ಥರಾದರು. ಐದಾರು ತಾಸುಗಳುರುಳಿದರೂ ಶ್ರೀಪಾದಂಗಳು ಬೆಟ್ಟದ ಮೇಲಿಂದ ಕೆಳಗೆ ಇಳಿದು ಬರಲಿಲ್ಲೆಂದು ತಾನೇ ಅಲ್ಲಿಗೆ ಹೋದನು. ಶ್ರೀಪಾದಂಗಳಿಗೆ ಹೊರಜಗತ್ತಿನ ಪ್ರಜ್ಞೆಯೇ ಇರಲಿಲ್ಲ. ನಿರ್ವಿಕಲ್ಪ ಸಮಾಧಿಯಲ್ಲಿ ಲೀನವಾಗಿದ್ದರು. ಈ ಸ್ಥಿತಿಯಲ್ಲಿರುವ ಶ್ರೀಪಾದಂಗಳ ಮೇಲೆ ಸರ್ಪವು ಹರಿದಾಡುತ್ತಿತ್ತು. ಈ ದೃಶ್ಯವನ್ನು ಆನಂದಾಶ್ಚರ್ಯದಿಂದ ನೋಡುತ್ತ, ದಿಙ್ಮೂಢನಂತಾಗಿದ್ದನು. ಅವನಿಗೆ ಶ್ರೀಪಾದಂಗಳ ಮೇಲೆ ಹರಿದಾಡುವ ಸರ್ಪವು ಅವರ ಹೃದಯದಲ್ಲಿ ಮರೆಯಾದಂತೆ ಭಾಸವಾಗುತ್ತಿತ್ತು. ಈ ದೃಶ್ಯವನ್ನು ಕಣ್ತುಂಬ ಮೈಮನತುಂಬ ತುಂಬಿಕೊಂಡ ಅವನ ಮನಸ್ಸು ಅವನಿಗರಿವಿಲ್ಲದಂತೆ "ಶ್ರೀಪಾದಂಗಳು ಶೇಷಾಂಶ ಸಂಭೂತರು" ಎಂದು ನುಡಿಯಿತು. ಇಂತಹ ಮಹಾತ್ಮರು ಸ್ಥಾಪಿಸಿದ ಕಣ್ವಮಠದ ಅನುಯಾಯಿಯಾದದ್ದು, ಇಂತಹ ಮಹಾತ್ಮರ ದರ್ಶನವಾದದ್ದು ತನ್ನ ಪೂರ್ವಜನ್ಮದ ಪುಣ್ಯವೆಂದೇ ಬಗೆದನು. ಅವನ ಮನಸ್ಸು ಯಾವಾಗಲೂ ಗುರುಗಳ ಸಾನಿಧ್ಯ ಬಯಸುತ್ತಿತ್ತು. ಒಂದು ದಿನ ವಿನಮ್ರದಿಂದ ಶ್ರೀಪಾದಂಗಳ ಪಾದಕ್ಕೆರಗಿ ಕುಳಿತುಕೊಂಡು "ಶ್ರೀ ಪಾದಂಗಳವರೇ, ನನ್ನ ಮನಸ್ಸು ಯಾವಾಗಲೂ ತಮ್ಮ ಸಾನಿಧ್ಯವನ್ನು ಬಯಸುತ್ತದೆ. ತಮ್ಮ ಪಾದ ಸೇವೆಗೈಯುತ್ತ ಮೋಕ್ಷಮಾರ್ಗದಲ್ಲಿ ಸಾಗಬೇಕೆನ್ನುವ ತೀವ್ರತೆ ಜಾಗೃತವಾಗಿದೆ. ನಾನು ಬ್ರಹ್ಮಚಾರಿಯಾಗಿದ್ದರೂ ಅರಿಷಡ್ವರ್ಗಗಳು, ಮನೆದೇವರು ಕೊಪ್ಪರದ ನರಸಿಂಹನ ಕೃಪೆಯಿಂದ ನನಗೆ ಬಾಧೆಯನ್ನು ಕೊಡುತ್ತಿಲ್ಲ. ತಾವು ನನಗೆ ಯತಿದೀಕ್ಷೆ ಪ್ರದಾನಮಾಡಬೇಕೆಂದು ಸನ್ನಿಧಿಯ ಗಮನಕ್ಕೆ ತರುತ್ತಿದ್ದೇನೆ" ಎಂದು ನಿವೇದಿಸಿ

ಕೊಂಡನು. ಈ ಮಾತಿಗೆ ಶ್ರೀಪಾದಂಗಳವರು ತಮ್ಮ ನಂತರದಲ್ಲಿ ವೇದಾಂತ ಸಾಮ್ರಾಜ್ಯವನ್ನಾಳಲು ಇವನೇ ಯೋಗ್ಯವ್ಯಕ್ತಿಯೆಂದು ತಿಳಿದು, " ಸೂಕ್ತ ಸಮಯದಲ್ಲಿ ಶ್ರೀಆದಿಶೇಷನ ಅನುಗ್ರಹದಿಂದ ಮತ್ತು ವಿಠ್ಠಲ ಕೃಷ್ಣನ ಆಶೀರ್ವಾದದಿಂದ ನಿನಗೆ ನನ್ನ ನಿರ್ಧಾರ ತಿಳಿಸುವೆ. ಇದು ನಿನಗೆ ನಮ್ಮ ಅಭಯ ವಚನವೆಂದು ತಿಳಿದುಕೊಳ್ಳಬೇಕು." ಎಂದು ನುಡಿದರು. ಶ್ರೀಪಾದಂಗಳು ತಮ್ಮ ಪ್ರಸ್ತಾಪವನ್ನು ಮನ್ನಣೆಮಾಡಿ ಅನುಗ್ರಹಿಸಿರುವುದು ಕಂಡು ಅವನಿಗೆ ಮಹದಾನಂದವಾಯಿತು.

ಮೈಸೂರು ರಾಜ್ಯದ ಮುಳಬಾಗಿಲು ಗ್ರಾಮದಿಂದ ಭಕ್ತರ ಓಲೆಬಂದಿತ್ತು. ಅದರಲ್ಲಿ ಅವರು ಶ್ರೀಪಾದಂಗಳವರನ್ನು ತಮ್ಮ ನಾಡಿಗೆ ವಿಜಯಯಾತ್ರೆಗೆ ಆಗ್ರಹಿಸಿದರು. ಅದಕ್ಕಾಗಿ ಶ್ರೀಪಾದರು ಅಲ್ಲಿಗೆ ಹೊರಡಲನುವಾದರು. ಶ್ರೀ ವಿಷ್ಣುಪ್ರಿಯ ತೀರ್ಥರಿಗೆ ಶ್ರೀಮಠದ ಆಡಳಿತವನ್ನು ಒಪ್ಪಿಸಿ ವಿದ್ವಾಂಸರೊಂದಿಗೆ ಆದವಾನಿ, ಅನಂತಪುರಕ್ಕೆ ತೆರಳಿದರು. ಅನಂತಪುರ ಪಟ್ಟಣವನ್ನು ಪ್ರವೇಶಮಾಡಿ ವಿಶ್ರಾಮ ತೆಗೆದುಕೊಳ್ಳುತ್ತಿರುವಾಗ ಕೆಲವು ಜನ ಪಂಡಿತರು ಶ್ರೀಗಳೊಂದಿಗೆ ವಾದಕ್ಕಾಗಿ ಬಂದು ಕುಳಿತರು. ತಮಗೆ ಶ್ರೀಕಣ್ವಮಠದ ಗುರುಪರಂಪರೆಯನ್ನು ಆಧಾರಸಹಿತ ತೋರಿಸಿ ಮುಂದೆ ಸಾಗಬೇಕೆಂದು ಪಟ್ಟುಹಿಡಿದರು. ಆಗ ಶ್ರೀಪಾದಂಗಳು ತಮ್ಮ ಪ್ರಸಾದಿಕ ವಾಣಿಯಿಂದ ಶ್ರೀಮನ್ನಾರಾಯಣನಿಂದ ಶ್ರೀಯಾಜ್ಞವಲ್ಕ್ಯ ಹಾಗೂ ಶ್ರೀಆನಂದತೀರ್ಥರವರಿಗೆ ಪರಂಪರಾಗತ ಸಾಗಿಬಂದ ಮಠದ ಅವಿಚ್ಛಿನ್ನ ಪರಂಪರೆಯನ್ನು ಶ್ರುತಿ, ಸ್ಮೃತಿ, ಪುರಾಣ ಮತ್ತು ಇತಿಹಾಸಗಳ ಆಧಾರದಿಂದ ಶ್ರುತಪಡಿಸಿ ನಿರುತ್ತರರನ್ನಾಗಿ ಮಾಡಿದರು ಹಾಗೂ ಶಿರೂರು ಮಠದ ಶ್ರೀಪಾದಂಗಳವರಾದ ಶ್ರೀಲಕ್ಷ್ಮೀಮನೋಹರ ತೀರ್ಥರು ತಮಗೆ ಬರೆದುಕೊಟ್ಟ ಅಧಿಕಾರ ಪತ್ರವನ್ನು ತೋರಿಸಿ ವಾದಿಗಳ ಮನಸ್ಸಿಗೆ ಸಮಾಧಾನವನ್ನುಂಟುಮಾಡಿದರು.

ಆದಾಗ್ಯೂ ಅಲ್ಲಿಯ ಅನ್ಯಶಾಖೆಯ ಬ್ರಾಹ್ಮಣರು, ಶ್ರೀಕಣ್ವಮಠದ ಶ್ರೀಪಾದಂಗಳು ವಿಷ್ಣುಧರ್ಮ ಪ್ರಚಾರ ಮಾಡಲು ವೇದ ಆಧಾರಿತ ಪರಂಪರೆಯ ಮಠವಿದಲ್ಲವೆಂದು ಅನಂತಪುರ ಜಿಲ್ಲೆಯ ಕಲೆಕ್ಟರ್ ಮೇಜರ್ ಜನರಲ್ ಸರ್ ಥಾಮಸ್ ಮೆನ್ರೊ, ಆರ್ಮಿ ಆಫೀಸರ್ ಮತ್ತು ಸ್ಟೇಟ್ಸ್‌ಮನ್ (1800 –1807) ಮದ್ರಾಸ್ ಪ್ರೆಸಿಡೆನ್ಸಿ ಇವರಿಗೆ ದೂರು ಸಲ್ಲಿಸಿದರು. ಇದಕ್ಕೆ ಪ್ರತಿಯಾಗಿ ಶ್ರೀ ಮಠದ ದಿವಾನ ಇವರು ಶ್ರೀಮನ್ನಾರಾಯಣನಿಂದ, ಯಾಜ್ಞವಲ್ಕ್ಯ ಮತ್ತು ಆನಂದತೀರ್ಥರವರೆಗೆ ಪರಂಪರಾಗತ ಸಾಗಿಬಂದ ಮಠದ ಅವಿಚ್ಛಿನ್ನ ಪರಂಪರೆಯನ್ನು ಶ್ರುತಿ, ಸ್ಮೃತಿ, ಪುರಾಣ ಮತ್ತು ಇತಿಹಾಸಗಳ ಮೂಲಕ ಶ್ರುತಪಡಿಸಿದ ದಾಖಲೆಗಳನ್ನು ಅನಂತಪುರ ಕಲೆಕ್ಟರ ಇವರಿಗೆ ಸಲ್ಲಿಸಿದರು.

ಎರಡು ಕಡೆಯ ವಾದಗಳನ್ನು ಆಲಿಸಿ ಮತ್ತು ದಾಖಲೆಗಳನ್ನು ಪರಿಶೀಲಿಸಿದ ಮೇಲೆ ಕೈಫಿಯತ್ನಾಮಾ (ಸರಕಾರದ ವಿವರಣೆ) ವನ್ನು ನೀಡಿ ಧರ್ಮಪ್ರಚಾರ ಮಾಡಲು ಅನುಮತಿ ಕೊಟ್ಟರು. (ಈ ಕೈಫಿಯತ್ ನಾಮಾದ(ಸರಕಾರದ ವಿವರಣೆಯ) ದಿನಾಂಕ 15.04.1806 (1728 ಅಕ್ಷಯ ನಾಮ ಸಂವತ್ಸರ ವೈಶಾಖ ಬಹುಳ 12ನೇದಿನ) ಕನ್ನಡದಲ್ಲಿದ್ದ ಈ ಸರ್ಕಾರದ ವಿವರಣೆಯು ಸುರಪುರದ ರಾಮಚಂದ್ರಾಚಾರ್ಯರ ಹತ್ತಿರವಿತ್ತು ಅದನ್ನು "ಶ್ರೀ ವಾಜಸನೇಯ ಬ್ರಾಹ್ಮಣ ಪ್ರಭಾವಮು" ಎಂಬ ತೆಲುಗು ಭಾಷೆಯ ಗ್ರಂಥದಲ್ಲಿ ತೆಲುಗುಲಿಪಿ (ಕನ್ನಡ

ಭಾಷೆ)ಯಲ್ಲಿ (31.10.1872ರಂದು) ಮುದ್ರಿತವಾಗಿತ್ತು. ಬಳಿಕ ಶ್ರೀರಾಮಮೂರ್ತಿ ಜೋಷಿ ಸಿರುಗುಪ್ಪ ಇವರು ತಾವು ಸಂಪಾದಿಸಿ, ಭಾಷಾಂತರ ಮಾಡಿದ ಕನ್ನಡ ಪುಸ್ತಕ "ಶ್ರೀ ವಾಜಸನೇಯ ಬ್ರಾಹ್ಮಣ ಪ್ರಭಾವ ಅರ್ಥಾತ ಶ್ರೀ ಯಾಜ್ಞವಲ್ಕ್ಯರ ಮಹಿಮೆ"ಯಲ್ಲಿ ಮರಳಿ ಲಿಪ್ಯಂತರ ಮಾಡಿ ಉಪಕರಿಸಿದ್ದಾರೆ. (ಹೆಚ್ಚಿನ ವಿವರಗಳಿಗಾಗಿ ಅನುಬಂಧ ನೋಡಬಹುದು.) ಅನಂತಪುರ ಜಿಲ್ಲೆ ಕಲೆಕ್ಟರ ಸರ್‌ಥಾಮಸ್ ಮನ್ರೋ ಇವರು ಶ್ರೀ ಮಾಧವತೀರ್ಥ ಶ್ರೀಪಾದಂಗಳವರ ದಿವ್ಯ ತೇಜಸ್ಸನ್ನೂ, ಪ್ರತಿಭಾಶಾಲಿತ್ವವನ್ನು, ಕಣ್ವಮಠದ ಸಾಧಾರ ಗುರುಪರಂಪರೆಯ ಇತಿಹಾಸವನ್ನು ಕಂಡು ಬೆರಗಾಗಿ, ಮಹಾತ್ಮರಾದ ಇವರನ್ನು ಯಾರು ತಡೆಯಲಾಗದೆಂದು ಅಭಿಪ್ರಾಯ ಪಟ್ಟು ಸಕಲಮರ್ಯಾದೆಯೊಂದಿಗೆ ಕಣ್ವಮಠೀಯರನ್ನು ಬೀಳ್ಕೊಟ್ಟರು. ಅನಂತಪುರದಲ್ಲಿ ಇರುವಾಗ ಶ್ರೀಪಾದಂಗಳ ಆರೋಗ್ಯವು ಹದಗೆಡ ಹತ್ತಿತು.ವೈದ್ಯರು ಉಪಚರಿಸಿದರೂ ಗುಣಮುಖರಾಗುವ ಲಕ್ಷಣ ಕಂಡುಬರಲಿಲ್ಲ. ಮುಂದೆ ಪ್ರಯಾಣ ಬೆಳೆಸುವುದು ಯೋಗ್ಯವಲ್ಲವೆಂದರಿತು, ಮಠದ ದಿವಾನರನ್ನು ಕರೆದು. "ಪ್ರಕೃತಿಯು ಇದೀಗ ಬಹಳ ಅಸ್ವಸ್ಥವಾಗತೊಡಗಿದೆ. ಕಾರಣ ಇನ್ನು ಮುಂದೆ ಸಾಗಬೇಕೆಂದಿರುವ ಪ್ರವಾಸವನ್ನು ಮೊಟಕುಗೊಳಿಸಿ. ನಮ್ಮ ಆರೋಗ್ಯವು ಸುಧಾರಿಸುವವರೆಗೆ ನಮ್ಮ ಪರಮ ಶಿಷ್ಯರಾದ ಬುದ್ದಿನ್ನಿಯ ದೇಸಾಯಿಯವರ ಹತ್ತಿರ ನಾವು ಇರಬೇಕೆಂದು ಮಾಡಿರುವೆವು. ಹಾಗೂ ಕೆಲವುದಿವಸ ಶ್ರೀ ವಿಠ್ಠಲ ಕೃಷ್ಣ ಸ್ವಾಮಿಯ ಅರ್ಚನೆಯು ಭಗವದ್ಭಕ್ತರಾದ ಅವರ ಮನೆಯಲ್ಲಿಯೇ ನಡೆಸಬೇಕೆಂದು ಆದಿಶೇಷನು ನಮಗೆ ಪ್ರೇರೇಪಿಸಿರುವನು. ಕಾರಣ ನಾವು ತೀವ್ರವಾಗಿ ಅಲ್ಲಿಗೆ ಸಾಗಿ ತಲುಪುವೆವು. ಮಧ್ಯದಲ್ಲಿ ಹಿರೇಕೊಟ್ನಿಕಲ್ ಭಾರದ್ವಾಜ ಗೋತ್ರೋತ್ಪನ್ನ ಕುಲಕರ್ಣಿಯವರ ಮನೆಯಲ್ಲಿ ತಂಗಬೇಕು. ಅವರ ಕಿರಿಯ ಮಗನಿಗೆ ಯತಿದೀಕ್ಷೆಯನ್ನು ಚೀಕಲಪರ್ವಿಯ ಮುಂದೆ ಹರಿಯುತ್ತಿರುವ ತುಂಗಭದ್ರೆಯಲ್ಲಿ ಕೊಟ್ಟು, ಅವನನ್ನು ಕರೆದುಕೊಂಡು ಬುದ್ದಿನ್ನಿಗೆ ಸಾಗುವೆವು. ನೀವು ಮಠದ ಸಕಲ ಪರಿವಾರವನ್ನು ಕರೆದುಕೊಂಡು ಬಂದು ನಮ್ಮನ್ನು ಅಲ್ಲಿ ಕೂಡಿಕೊಳ್ಳಿರಿ" ಎಂದು ಶ್ರೀಪಾದಂಗಳು ಆಜ್ಞೆಮಾಡಿದರು.

ಎರಡು ವಾರದ ಪ್ರಯಾಣದ ನಂತರ ಹಿರೇಕೊಟ್ನಿಕಲ್ ಗ್ರಾಮವನ್ನು ತಲುಪಿ, ತಾವು ಬರುವ ಸೂಚನೆಯನ್ನು ಕುಲಕರ್ಣಿಯವರಿಗೆ ಮುಟ್ಟಿಸಿದರು. ಕುಲಕರ್ಣಿಯವರು ಸಕಲ ಮರ್ಯಾದೆಯಿಂದ ಮಂಗಳವಾದ್ಯದೊಂದಿಗೆ ಮನೆಗೆ ಕರೆದುಕೊಂಡುಹೋದರು. ಬಳಿಕ ಕುಲಕರ್ಣಿಯವರ ಕಿರಿಯ ಮಗನನ್ನು ಉದ್ದೇಶಿಸಿ.

"ಹೇ ಪ್ರಿಯ ಶಿಷ್ಯನೇ, ನೀನು ಈ ಮೊದಲು ವೀರಘಟ್ಟಕ್ಕೆ ಬಂದಾಗ ನಿನ್ನ ಮನಸ್ಸು ನಮ್ಮ ಸಾನಿಧ್ಯವನ್ನು ಬಯಸುತ್ತದೆ ಎಂದು ಹೇಳಿದ್ದಿ. ಮೋಕ್ಷಮಾರ್ಗದಲ್ಲಿ ಕ್ರಮಿಸಲು ಯತಿದೀಕ್ಷೆಯನ್ನು ಕರುಣಿಸಬೇಕೆಂದು ಪ್ರಾರ್ಥಿಸಿದ್ದಿ. ಈಗ ನಿನಗೆ ಯತಿದೀಕ್ಷೆ ನೀಡುವ ಸಮಯ ಕೂಡಿ ಬಂದಿದೆ. ವಿಜಯದಾಸರ ಜನ್ಮಭೂಮಿ ಚೀಕಲಪರ್ವಿಯ ಸನಿಹದಲ್ಲಿ ಹರಿಯುತ್ತಿರುವ ತುಂಗಭದ್ರೆಯಲ್ಲಿ ಆತ್ಮಶ್ರಾದ್ಧಾದಿ ವೈದಿಕಕಾರ್ಯಗಳನ್ನು ಮುಗಿಸೋಣ" ಎಂದು ಹೇಳಿದರು. ಮರುದಿನ ಚೀಕಲಪರ್ವಿಯ ಬಳಿ ಹರಿಯುತ್ತಿರುವ ತುಂಗಭದ್ರಾ ನದಿಯ ದಂಡೆಯ ಮೇಲೆ ಅವನ ಆತ್ಮಶ್ರಾದ್ಧಾದಿ ವೈದಿಕ ಕಾರ್ಯಗಳನ್ನು ಮುಗಿಸಿದರು. ಬಳಿಕ ಶ್ರೀಪಾದಂಗಳು ವಿದ್ಯುಕ್ತವಾಗಿ ಕ್ರಮಪೂರ್ವಕ ಸನ್ಯಾಸ ದೀಕ್ಷೆಯನ್ನು ಕೊಟ್ಟು ಅಕ್ಷೋಭ್ಯತೀರ್ಥರೆಂಬ ನಾಮಧೇಯವನ್ನಿಟ್ಟರು.

ಶ್ರೀಮಾಧವತೀರ್ಥ ಶ್ರೀಪಾದಂಗಳು ಬುದ್ದಿನ್ನಿ ಗ್ರಾಮಕ್ಕೆ ಆಗಮಿಸಿದರು. ಗ್ರಾಮದ ದೇಸಾಯಿಯವರು ಸಕಲ ಭಕ್ತರನ್ನು ಕರೆದುಕೊಂಡು ಸಕಲ ವೈಭವದೊಂದಿಗೆ ಶ್ರೀಗಳನ್ನು ಸತ್ಕಾರದಿಂದ ಕರೆದುಕೊಂಡು ಹೋದರು. ನಂತರ ಶ್ರೀಪಾದಂಗಳವರು "ಭಗವಾನ್ ಆದಿಶೇಷನ ಮತ್ತು ಶ್ರೀವಿಠ್ಠಲಕೃಷ್ಣ ದೇವರ ಪ್ರೇರಣೆಯಂತೆ ಇಂದಿನಿಂದ ಸ್ವಾಮಿಯ ಪೂಜೆಯು ಇಲ್ಲಿಯೇ ನಡೆಯುವುದು. ಅಲ್ಲದೆ ನಮ್ಮ ಪ್ರಕೃತಿಯು ಅಸ್ವಸ್ಥವಾಗಿರುವುದರಿಂದ ಮುಂದೆ ನಾವು ಇಲ್ಲಿಯೇ ವೃಂದಾವನಸ್ಥರಾಗಬೇಕೆಂದು ಸಂಕಲ್ಪ ಮಾಡಿದ್ದೇವೆ" ಎಂದು ಬುದ್ದಿನ್ನಿ ದೇಸಾಯಿಯವರಾದ ಕೀರ್ತಪ್ಪಯ್ಯನವರಿಗೂ ಮತ್ತು ಭಕ್ತಾದಿಗಳಿಗೂ ತಿಳಿಸಿದರು.

ಕೆಲವು ದಿನಗಳನಂತರ ಶ್ರೀ ವಾಮನ ತೀರ್ಥರು ಶಾ.ಶ. 1729 ಪ್ರಭವನಾಮ ಸಂವತ್ಸರ ಆಷಾಢ ಶುದ್ಧ ಪೌರ್ಣಿಮೆಯಂದು (20.06.1807) ವೃಂದಾವನಸ್ಥರಾದರೆಂಬ ಸುದ್ದಿಯು ಬಂದಿತು. ಈ ಸುದ್ದಿಯನ್ನು ಕೇಳಿದ ನಂತರ ಶ್ರೀಗಳವರ ಮನಸ್ಸಿಗೆ ಬಹಳ ಖೇದವಾಯಿತು.

ಶ್ರೀಪಾದಂಗಳವರಿಗೆ ಯಾವುದೇ ಚಿಕಿತ್ಸೆಯಿಂದ ರೋಗ ಗುಣಮುಖರಾಗದಿರಲು ತಮ್ಮ ಪ್ರಿಯ ಶಿಷ್ಯನಾದ ವಿಷ್ಣುಪ್ರಿಯ ತೀರ್ಥರನ್ನು, ತಮಗೆ ಆರು ತಿಂಗಳಕಾಲ ಸೇವೆಗೈದ ಆನೆಹೊಸುರು ಕುಲಕರ್ಣಿ ಶೇಷಗಿರಿರಾಯ ಮತ್ತು ಸೌ.ಜೀವಮ್ಮ ಇವರನ್ನು ಬೇಗನೇ ಬರಲು ಸಂದೇಶ ಕಳಿಸಲು ದೇಸಾಯಿಯವರಿಗೆ ಆಜ್ಞಾಪಿಸಿದರು. ಸಂದೇಶ ಮುಟ್ಟಿದ ತಕ್ಷಣವೇ ವೀರಘಟ್ಟದಿಂದ ಶ್ರೀವಿಷ್ಣು ಪ್ರಿಯತೀರ್ಥರು, ಆನೆಹೊಸೂರಿನಿಂದ ಶೇಷಗಿರಿರಾಯ ಮತ್ತು ಸೌ.ಜೀವಮ್ಮ ದಂಪತಿಗಳು ಬೇಗನೇ ಬಂದರು. ಅದರಂತೆ ಎಲ್ಲ ಊರುಗಳಿಂದಲೂ ಭಕ್ತಾದಿಗಳು ಶ್ರೀ ಮಾಧವತೀರ್ಥರ ದರ್ಶನಕ್ಕಾಗಿ ಬಂದರು.

ತಮ್ಮ ದರ್ಶನಕ್ಕಾಗಿ ಬಂದ ಶೇಷಗಿರಿರಾಯ ಮತ್ತು ಸೌ.ಜೀವಮ್ಮರನ್ನು ಬಳಿಗೆ ಕರೆದು "ನಾವು ನಿಮ್ಮ ಮನೆಯಲ್ಲಿ ಆರುತಿಂಗಳಕಾಲ ತಪಸ್ಸನ್ನು ಗೈಯಲು ತಂಗಿದ್ದೆವು. ನೀವು ಒಮ್ಮನಸ್ಸಿನಿಂದ, ಶ್ರದ್ಧೆಯಿಂದ ನಮ್ಮ ಸೇವೆಮಾಡಿರುವಿರಿ. ನಮ್ಮ ಆರಾಧ್ಯಮೂರ್ತಿ ವಿಠ್ಠಲಕೃಷ್ಣನೂ ಸಂಪ್ರೀತನಾಗಿದ್ದಾನೆ. ನೀವು ನಮಗೆ ಮಾಡಿದ ಸೇವೆಗೆ ಬೆಲೆಕಟ್ಟಲಾಗದು. ಆದರೂ ನಾವು ಸಹರ್ಷದಿಂದ ಹರಿಯಲಾರದ ಉಡುಗೊರೆಯಾಗಿ ಗುಡಗುಂಟಿ ಸಂಸ್ಥಾನದವರು ನಮಗೆ ಅರ್ಪಿಸಿದ 12ಎಕರೆಯ ದೀಪಾರಾಧನೆಯ ಪಟ್ಟಿಯನ್ನು ನೀಡುತ್ತಿದ್ದೇವೆ. 450 ಎಕರೆಯ ಒಡೆಯರಾದ ನೀವು ಈ ಉಡುಗೊರೆಯನ್ನು ನಿರಾಕರಿಸಬಾರದು" ಎಂದು ಆಜ್ಞಾಪಿಸಿ ಅದಕ್ಕೆ ಸಂಬಂಧಿಸಿದ ಪತ್ರವನ್ನು ನೀಡಿದರು.

ಶ್ರೀಪಾದಂಗಳು ಬಹಳ ಅಸ್ವಸ್ಥರಾಗತೊಡಗಿದರು. ಅವರ ಆರೋಗ್ಯವು ಬಹಳ ಕ್ಷೀಣವಾಗತೊಡಗಿತು. ಈ ಸಮಯದಲ್ಲಿ ಶ್ರೀ ಅಕ್ಷೋಭ್ಯತೀರ್ಥರು ಮತ್ತು ಶ್ರೀವಿಷ್ಣುಪ್ರೀಯ ತೀರ್ಥರು ಶ್ರೀಪಾದಂಗಳವರ ಯೋಗಕ್ಷೇಮವನ್ನು ಶ್ರದ್ಧೆಯಿಂದ ಮಾಡುತ್ತಿದ್ದರು. ಶ್ರೀಪಾದಂಗಳ ಪ್ರಕೃತಿಯು ಕ್ಷೀಣವಾಗತೊಡಗಿದಂತೆ, ಎಲ್ಲ ಭಕ್ತಾದಿಗಳು ವ್ಯಸನಕ್ಕೊಳಗಾದರು. ತಮ್ಮನ್ನು ಕಂಡು ದುಃಖಿತರಾಗುತ್ತಿರುವ ಇಬ್ಬರು ಯತಿಗಳನ್ನು, ಕೀರ್ತಪ್ಪಯ್ಯ ದೇಸಾಯಿಯವರನ್ನು, ಆನೆಹೊಸೂರಿನ ಕುಲಕರ್ಣಿ

ದಂಪತಿಗಳನ್ನು ಉದ್ದೇಶಿಸಿ" ಭವಿತವ್ಯವನ್ನು ತಪ್ಪಿಸಲು ಯಾರಿಂದಲೂ ಆಗದು, ನಮ್ಮ ಸೇವೆಯಿಂದ ನಿಮಗೆ ಅನಂತ ಕಲ್ಯಾಣವಾಗುವುದು. ಇದನ್ನು ದೃಢವಾಗಿ ನಂಬಿರಿ. ನಾವು ದೇಹವಿಟ್ಟರೂ ನಮ್ಮ ವೃಂದಾವನಕ್ಕೆ ಭಕ್ತಿಯಿಂದ ನಡೆದುಕೊಳ್ಳುವ ಆರ್ತರಿಗೆ, ದೀನರಿಗೆ, ದರಿದ್ರರಿಗೆ ಇಷ್ಟಾರ್ಥಸಿದ್ಧಿಗಾಗಿ ಮತ್ತು ಅವರ ಕಲ್ಯಾಣಕ್ಕಾಗಿ ನಮ್ಮ ತಪಸ್ಸಿನ ಸಾಮರ್ಥ್ಯವನ್ನು ಇಲ್ಲಿ ಇಡುವೆವು. ಭಗವಂತನ ಸಂಕಲ್ಪದ ಮೇರೆಗೆ ಸಂಭವಿಸುವುದೆಲ್ಲ ನಮ್ಮ ಕಲ್ಯಾಣಕ್ಕೆಂದು ತಿಳಿದು ಆನಂದದಿಂದ ಇರಬೇಕು" ಎಂದು ನುಡಿದರು. ಅಲ್ಲದೆ ತಮ್ಮ ಮಾತನ್ನು ಮುಂದುವರೆಸುತ್ತ,

"ನಾವು ಪವಿತ್ರ ಚೀಕಲಪರ್ವಿ ಕ್ಷೇತ್ರದಲ್ಲಿ ತುಂಗಭದ್ರೆಯ ತಟದಲ್ಲಿ ಕೊಟ್ನೆಕಲ್ ಕುಲಕರ್ಣಿ ಅವರ ಪುತ್ರನಿಗೆ ಆಶ್ರಮವನ್ನಿತ್ತು ಅಕ್ಷೋಭ್ಯತೀರ್ಥರೆಂದು ನಾಮಾಭಿದಾನ ಮಾಡಿದೆವು. ಇವರನ್ನು ನಮ್ಮ ಉತ್ತರಾಧಿಕಾರಿಯೆಂದು ಇಂದು ಘೋಷಿಸುತ್ತೇವೆ. ಇಲ್ಲಿಯವರೆಗೆ ನಮ್ಮ ಮತ್ತು ಕಣ್ವಮಠದ ಸೇವೆಗೈದ ನೀವೆಲ್ಲ ಭಕ್ತಾದಿಗಳು ಉದ್ಧಾರವಾಗಬೇಕು ಮತ್ತು ಈ ಸೇವೆಯು ಮುಂದುವರಿಯಬೇಕು. ಇದು ನಮ್ಮ ಆಜ್ಞೆ" ಎಂದು ಹೇಳಿದರು. ಶಾ.ಶ. 1731 ಶಾಲಿವಾಹನ ಶಕೆ ಶುಕ್ಲನಾಮ ಸಂವತ್ಸರ ಚೈತ್ರ ಶುದ್ಧ ತೃತೀಯ ತಿಥಿ ರವಿವಾರದಂದು ಹೊಸ ಉತ್ತರಾಧಿಕಾರಿಯಾದ ಅಕ್ಷೋಭ್ಯತೀರ್ಥ ಶ್ರೀಪಾದಂಗಳು ಪೀಠಾರೋಹಣ ಮಾಡಿದರು.

ಶ್ರೀ ಮಠದ ಅಂದಿನ ಎಲ್ಲ ಕಾರ್ಯಕ್ರಮ ಸಾಂಗವಾಗಿ ಸಂಪನ್ನವಾದ ಮೇಲೆ ಬುದ್ದಿನ್ನಿ ದೇಸಾಯಿಯವರನ್ನು ಮತ್ತು ಶ್ರೀಅಕ್ಷೋಭ್ಯತೀರ್ಥರನ್ನು ಉದ್ದೇಶಿಸಿ " ನಮ್ಮ ದೇಹಾರೋಗ್ಯ ಪೂರ್ಣ ಕ್ಷೀಣಿಸುತ್ತದೆ. ನಾವು ವೃಂದಾವನಸ್ಥರಾಗುವ ಸಮಯ ಕೂಡಿಬರುತ್ತಿದೆ. ಈ ಸಮಯದಲ್ಲಿ ಒಂದು ಮುಖ್ಯವಿಷಯವನ್ನು ತಿಳಿಯಪಡಿಸಲು ಇಷ್ಟಪಡುತ್ತೇವೆ. ಏನೆಂದರೆ ಶ್ರೀ ಮನ್ನಾರಾಯಣನು ಶ್ರೀರಾಮನಾಗಿ ಅವತಾರ ತಾಳಿ ದಕ್ಷಿಣಾಪಥದಲ್ಲಿ ಸಾಗಿ ಬರುವಾಗ ಎರಡೋಣಿ ಸಮೀಪದಲ್ಲಿರುವ ತೀರ್ಥದಲ್ಲಿ ತಂಗಿದ್ದನೆಂದು ಅದುವೇ ರಾಮತೀರ್ಥವಾಯಿತೆಂದು ನಮ್ಮ ಹಿರಿಯರು ಹೇಳುತ್ತಿದ್ದರು. ಮುಂದೆ ಹಾಗೆಯೇ ಸಾಗಿ ಬರುವಾಗ ಬೆಂಚಮರಡಿಯ ಪಕ್ಕದಲ್ಲಿರುವ ಹಿಲಾಲಪುರ ಗ್ರಾಮದ ಹನುಮನ ಬೆಟ್ಟದಲ್ಲಿ ವಿಶ್ರಾಂತಿ ಪಡೆದಿದ್ದನಂತೆ .ಆ ಬೆಟ್ಟದಲ್ಲಿರುವ ಪ್ರತಿಯೊಂದು ಶಿಲೆಯು ಶ್ರೀರಾಮನ ಪಾದಸ್ಪರ್ಶದಿಂದ ಪಾವನವಾಗಿದೆ. ಆ ಬೆಟ್ಟದಲ್ಲಿರುವ ಪಾವನ ಶಿಲೆಯಿಂದಲೇ ನಮ್ಮ ವೃಂದಾವನವನ್ನು ಕೆತ್ತಿಸಿ ಸ್ಥಾಪಿಸಬೇಕು" ಹೀಗೆಂದು ಆಜ್ಞಾಪಿಸಿದರು.

ಶಾಲಿವಾಹನ ಶಕೆ 1731 ಶುಕ್ಲನಾಮ ಸಂವತ್ಸರ ಚೈತ್ರ ಶುದ್ಧ ಚತುರ್ಥಿ ಸೋಮವಾರ (20.30.1809)ದಂದು ತಮ್ಮ ಸಕಲ ಆಹ್ನಿಕಗಳನ್ನು ಮುಗಿಸಿಕೊಂಡು .ಆರಾಧ್ಯ ಮೂರ್ತಿಯಾದ ಶ್ರೀ ವಿಠ್ಠಲಕೃಷ್ಣ ದೇವರನ್ನು ಮತ್ತು ಶ್ರೀಆದಿಶೇಷದೇವನನ್ನು ಪರಮ ಭಕ್ತಿಯಿಂದ ಸ್ಮರಿಸುತ್ತ ವೈಕುಂಠ ಲೋಕಕ್ಕೆ ತೆರಳಿದರು.

ಬಳಿಕ ಶ್ರೀ ಅಕ್ಷೋಭ್ಯತೀರ್ಥ ಶ್ರೀಪಾದಂಗಳು ಎಲ್ಲ ಶಿಷ್ಯರೊಂದಿಗೆ ಕೂಡಿಕೊಂಡು ಶ್ರೀಮಾಧವತೀರ್ಥ ಶ್ರೀಪಾದಂಗಳವರ ದೇಹವನ್ನು ಸುಗಂಧಾದಿ ದ್ರವ್ಯಗಳಿಂದ ಪೂಜಿಸಿ ಪಲ್ಲಕ್ಕಿಯಲ್ಲಿ ಇಟ್ಟುಕೊಂಡು, ವಿಜೃಂಭಣೆಯಿಂದ ಮಂಗಳವಾದ್ಯಗಳೊಂದಿಗೆ ಬುದ್ದಿನ್ನಿ ದೇಸಾಯಿಯವರು ನೀಡಿದ ಭೂಮಿಯಲ್ಲಿಯ

ಪೂರ್ವ ನಿರ್ಧಾರಿತ, ವೃಂದಾವನದ ಸ್ಥಳಕ್ಕೆ ತಂದು, ಯಥಾಸಾಂಗವಾಗಿ ಆ ಪವಿತ್ರದೇಹಕ್ಕೆ ಅಂತ್ಯೋಪಚಾರ ವಿಧಿಯನ್ನು ನೆರವೇರಿಸಿದರು.

ಬಳಿಕ ಅಕ್ಷೋಭ್ಯತೀರ್ಥ ಶ್ರೀಪಾದಂಗಳವರು ತಾವು ಶ್ರೀಮಾಧವತೀರ್ಥ ಶ್ರೀಪಾದಂಗಳ ಸನಿಹದಲ್ಲಿದ್ದ ಒಂದೊಂದೇ ಘಟನೆಗಳನ್ನು ನೆನೆಸುತ್ತ ಮತ್ತು ಅವರಲ್ಲಿರುವ ದ್ವೈತ ವಾಙ್ಮಯದ ಜ್ಞಾನವನ್ನು ಸ್ಮರಿಸಿಕೊಳ್ಳುತ್ತ ಈ ಚರಮ ಶ್ಲೋಕದ ರಚನೆಮಾಡಿ ಶ್ರೀಮಾಧವತೀರ್ಥ ಶ್ರೀಪಾದಂಗಳಿಗೆ ಅರ್ಪಿಸಿದರು.

**ಯೋ ಶೇಷಾಂಶ ಸಮುದ್ಭೂತಂ ಅಶೇಷವಿಷಯಪ್ರದಮ್ ।**
**ಮಾಧವಜ್ಞಾನ ಸಂಪನ್ನಂ ಮಾಧವಾರ್ಯ ಗುರುಂಭಜೇ ॥**
**ದ್ವೈತ ಸಿದ್ಧಾಂತ ವಕ್ತಾರಂ ಕಾಣ್ವಂತೇವಾಸಿನಂ ಮುದಾ ।**
**ಭಜೇಹಂ ಜ್ಞಾನದಂ ನಿತ್ಯಂ ಸುರದ್ರುಮನಿಭಂ ಗುರುಮ್ ॥**

ಮುಂದೆ ಶ್ರೀಅಕ್ಷೋಭ್ಯತೀರ್ಥ ಶ್ರೀಪಾದಂಗಳು ಬುದ್ದಿನ್ನಿ ದೇಸಾಯಿ ಕೀರ್ತಪ್ಪಯ್ಯ ಇವರ ಸೇವೆಯನ್ನು ಬಳಸಿಕೊಂಡು, ಹಿಲಾಲಪುರ ಗ್ರಾಮದಲ್ಲಿರುವ ಹನುಮನ ಬೆಟ್ಟದಲ್ಲಿರುವ ಬಂಡೆಯಲ್ಲಿ ಸುಂದರವಾದ ವೃಂದಾವನವನ್ನು ಕೆತ್ತಿಸಿ ಬುದ್ದಿನ್ನಿಯಲ್ಲಿ ಸ್ಥಾಪಿಸಿದರು. ಮತ್ತು ಗುರುಗಳ ನಿತ್ಯ ಸೇವೆಯ ವ್ಯವಸ್ಥೆಯನ್ನು ಮಾಡಿ ವೀರಘಟ್ಟಕ್ಕೆ ಹೋಗಿ ನೆಲೆಸಿದರು.

ಶ್ರೀಮನ್ ಮಾಧವತೀರ್ಥರ ಪ್ರಥಮ ಆರಾಧನೆಯದಿನ ಸಮೀಪಿಸುತ್ತಿದಂತೆ. ಶ್ರೀ ಅಕ್ಷೋಭ್ಯತೀರ್ಥ ಶ್ರೀಪಾದಂಗಳು, ಬುದ್ದಿನ್ನಿಯ ಕೀರ್ತಪ್ಪಯ್ಯ ದೇಸಾಯಿಯವರ, ಆನೆಹೊಸೂರು ಕುಲಕರ್ಣಿಯವರ ಮತ್ತು ತಲೆಖಾನ ಕುಲಕರ್ಣಿಯುವರ ಸೇವೆಯನ್ನು ಪರಿಗಣಿಸಿ ಆರಾಧನೆಯ ರೂಪರೇಷೆಗಳನ್ನು ಸಿದ್ಧಪಡಿಸಿದರು. ಮೊದಲನೆ ದಿನದ ಆರಾಧನೆಯ ಅಲಂಕಾರ ಸೇವೆಯನ್ನು ಅಂಕನಾಳ ಪುರೋಹಿತರು, ಮಧ್ಯಾರಾಧನೆಯ ಅಲಂಕಾರ ಸೇವೆಯನ್ನು ಆನೆಹೊಸುರು ಕುಲಕರ್ಣಿಯವರು ಮತ್ತು ಕೊನೆಯ ಆರಾಧನೆಯ ಅಲಂಕಾರ ಸೇವೆಯನ್ನು ತಲೇಖಾನ ಕುಲಕರ್ಣಿಯವರು ವಹಿಸಿಕೊಳ್ಳುವಂತೆ ಶ್ರೀಪಾದಂಗಳು ಆಜ್ಞಾಪಿಸಿದರು. ಹಾಗೂ ಮೂರುದಿನಗಳ ಕಾಲ ಬುದ್ದಿನ್ನಿಯಲ್ಲಿ ನಡೆಯುವ ಕಾರ್ಯಕ್ರಮದ ಪೂರ್ಣ ಹೊಣೆಯನ್ನು ಬುದ್ದಿನ್ನಿಯ ದೇಸಾಯಿಯವರೇ ನಿರ್ವಹಿಸಬೇಕೆಂದು ನಿರ್ಣಯಿಸಲಾಯಿತು. ಪ್ರತಿನಿತ್ಯವೂ ನಡೆಯಬೇಕಾದ ಪೂಜೆ ಅರ್ಚನಾದಿ ಕಾರ್ಯಕ್ರಮಗಳು ನಿರ್ವಿಘ್ನವಾಗಿ ಸಾಗಲು ಎಲ್ಲ ವ್ಯವಸ್ಥೆಯನ್ನು ಮಾಡಲಾಯಿತು.

ಶ್ರೀಮಾಧವ ತೀರ್ಥ ಶ್ರೀಪಾದಂಗಳು ತಮಗೆ ಕಾಣಿಕೆಯಾಗಿ ನೀಡಿದ ಭೂಮಿಯನ್ನು ಆನೆಹೊಸುರು ಕುಲಕರ್ಣಿಯವರು ತಮ್ಮ ಗೋನವಾರದಲ್ಲಿರುವ ಪುರೋಹಿತರಿಗೆ ನೀಡಿ, ಆ ಭೂಮಿಯಿಂದ ಬರುವ ಆದಾಯದಿಂದ ಶ್ರೀಪಾದಂಗಳ ಮಧ್ಯಾರಾಧನೆಯ ಸೇವೆಯನ್ನು ಮಾಡಬೇಕೆಂದು ಪುರೋಹಿತರನ್ನು ವಿನಂತಿಸಿಕೊಂಡರು.

ಶ್ರೀ ಮನ್ ಮಾಧವತೀರ್ಥರು ವೃಂದಾವನಸ್ಥರಾದ ಮೇಲೆ ತಮ್ಮ ಆರಾಧನೆಯ ದಿನದಂದು ಸರ್ಪರೂಪದಲ್ಲಿ ದರ್ಶನವನ್ನು ನೀಡಿ ಉದ್ಧರಿಸಿದ ಬಹಳಷ್ಟು ಉದಾಹರಣೆಗಳಿವೆ.

ಜೋಳದಹೆಡಗಿಯಲ್ಲಿ ಜನ್ಮತಾಳಿ, ಗೋನವಾರದ ಶ್ರೀನಿವಾಸರಾವ ಕುಲಕರ್ಣಿಯವರ ಆಶ್ರಯದಲ್ಲಿದ್ದು ಬಳಿಕ ಲಿಂಗದಹಳ್ಳಿಯ ಸಮೀಪ ಹರಿಯುತ್ತಿರುವ ಕೃಷ್ಣವೇಣಿ ನದಿಯ  ತಟದಲ್ಲಿ 1948 ರಲ್ಲಿ ಸಮಾಧಿಸ್ಥರಾದ ರಾಮದಾಸರು ಬಹಳ ಭಕ್ತಿಪರ ಹಾಡುಗಳನ್ನು ಶ್ರೀಮಾಧವತೀರ್ಥರ ಬಗ್ಗೆ ರಚಿಸಿದ್ದಾರೆ. ಶ್ರೀ ಮಾಧವತೀರ್ಥರ ವೃಂದಾವನ ಕ್ಷೇತ್ರದ ಆವರಣಗೋಡೆಯನ್ನು ಶ್ರೀರಾಮದಾಸರೇ ಸ್ವತಃ ನಿಂತು ಕಟ್ಟಿಸಿದ್ದರು.

ಒಂದು ಸಲ ಶ್ರೀವಿದ್ಯಾತಪೋನಿಧಿ ಶ್ರೀಪಾದಂಗಳು ಬುದ್ದಿನ್ನಿಯಲ್ಲಿ ಚಾತುರ್ಮಾಸ ವ್ರತವನ್ನು ಆಚರಿಸುತ್ತಿರುವಾಗ ನಡೆದ  ಘಟನೆ. ಇದು ಶ್ರೀಪಾದಂಗಳು ಸಾಯಂಕಾಲ ಉಪದೇಶ ವಚನವನ್ನು ನೀಡುತ್ತಿರುವಾಗ ಹೊಲದೊಳಗಿಂದ ಒಂದು ನಾಗರಹಾವು ಉಪನ್ಯಾಸ ನೀಡುವ ಸ್ಥಳಕ್ಕೆ ಬಂದಿತು. ಜನರು ಗಲಿಬಿಲಿಗೊಂಡು ಎದ್ದುನಿಂತರು. ಆಗ ಶ್ರೀಪಾದಂಗಳೂ ಎದ್ದು ತಾವು ಕುಳಿತ ಸ್ಥಳದಿಂದ ದೂರ ಸರಿದಾಗ, ಆ ಹಾವು ಕೃಷ್ಣಾಂಜನ ಹಾಸಿದ ಶ್ರೀಪಾದಂಗಳ ಪೀಠದಲ್ಲಿ ಬಂದು ಕುಳಿತುಕೊಂಡಿತು. ಶ್ರೀಪಾದಂಗಳು ಜನರಿಗೆ ಶ್ರೀಮಾಧವತೀರ್ಥರೇ ಈ ರೂಪದಲ್ಲಿ ಬಂದು ದರ್ಶನವಿತ್ತಿದ್ದಾರೆ ಎಂದು  ಹೇಳಿ ಮಂಗಳಾರುತಿ ಬೆಳಗಿದಾಗ, ನಾಗರಹಾವು ವೃಂದವನ ಸ್ಥಳಕ್ಕೆ ಸಾಗಿ ಮಾಯವಾಯಿತು. ಹೀಗೆ ಸರ್ಪರೂಪದಲ್ಲಿ ಶ್ರೀಮಾಧವತೀರ್ಥರು ಹಲವರಿಗೆ ದರ್ಶನ ಭಾಗ್ಯವನ್ನು ಇಂದಿಗೂ ಕರುಣಿಸುತ್ತಿರುವರು. ಇಂತಹ ಮಹಿಮಾವಂತ ಗುರುಗಳನ್ನು ಪಡೆದ ನಾವೇ ಧನ್ಯರು.

ಲೇಖಕರು : **ಸತ್ಯನಾರಾಯಣ ಮುಜುಮದಾರ,** ರಾಯಚೂರು

ಫೋ.ನಂ. : 9449066878.

* * *